ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 255 RNI Number : KNKAN/25/A2770 28-09-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:255 ರಾಯಚೂರು 28-09-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ

ಪತ್ರಕರ್ತರ, ವಿವಿಧ ಇಲಾಖೆ ಅಧಿಕಾರಿಗಳ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಗೆ ಡಿಸಿ ಪೂವಿತಾ ಎಸ್ ಚಾಲನೆ





ರಾಯಚೂರು,ಸೆ.26: ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ವಿವಿಧ ಇಲಾಖೆ ಅಧಿಕಾರಿಗಳ ಸೌಹಾರ್ದ ಕ್ರಿಕೆಟ್ ಟೂರ್ನಮೆಂಟ್ ಗೆ ಜಿಲ್ಲಾಧಿಕಾರಿ ಪೂವಿತಾ ಎಸ್ ಅವರು ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದರು.

ಇಂದು ಪೊಲೀಸ್ ಪರೇಡ್ ಮೈದಾನದಲ್ಲಿ ರಿಪೋರ್ಟರ್ಸ್ ಗಿಲ್ಡ್ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಕ್ರಿಕೆಟ್ ಟೂರ್ನಮೆಂಟ್ ಗೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿ ಪೂವಿತಾ ಎಸ್ ಅಧಿಕಾರಿಗಳ ಮಧ್ಯೆ ಈ ರೀತಿ ಕ್ರೀಡಾ ಸ್ಪೂರ್ತಿಯ ವಾತಾವರಣ ಸಿಗಬೇಕು. ಇಂತಹ ಕ್ರೀಡಾಕೂಟಗಳ ಮೂಲಕ ಮಾಹಿತಿ ಹಂಚಿಕೆಗೆ ಸೌಹಾರ್ದತೆ ಬೆಳೆಯಲಿದೆ ಎಂದರು. ಕ್ರೀಡೆಗಳಲ್ಲಿ ತೊಡಗಿಕೊಳ್ಳುವುದರಿಂದ ಆರೋಗ್ಯಕರ ಸೌಹಾರ್ದ ಭಾವನೆ ಉಂಟಾಗುತ್ತದೆ, ದೈಹಿಕ ಫಿಟ್ನೆಸ್‌ಗೆ ಅನುಕೂಲ ಆಗಲಿದೆ ಎಂದರು.

ಕರ್ನಾಟಕ ಮಾಹಿತಿ ಆಯೋಗದ ಕಲಬುರ್ಗಿ ಪೀಠದ ಆಯುಕ್ತ ವೆಂಕಟ ಸಿಂಗ್ ಮಾತನಾಡಿ ರಾಯಚೂರು ರಿಪೋರ್ಟರ್ಸ್ ಗಿಲ್ಡ್ 25 ವರ್ಷಗಳಿಂದ ನಗರದಲ್ಲಿ ಪತ್ರಕರ್ತರಿಗೆ ವಿವಿಧ ಚಟುವಟಿಕೆಗಳನ್ನು ಆಯೋಜಿಸುತ್ತ ಬರುತ್ತಿದೆ. ಇಂದು ಬೆಳ್ಳಿ ಮಹೋತ್ಸವದ ಅಂಗವಾಗಿ ಕ್ರೀಡಾಕೂಟ ಆಯೋಜಿಸಿದ್ದು ಉತ್ತಮವಾಗಿದೆ. ಆಗ ನಗರಸಭೆ ನೀಡಿದ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದು ಪತ್ರಕರ್ತರ ಪ್ರಾತಿನಿಧಿಕ ಸಂಸ್ಥೆಯಾಗಿ ಗಿಲ್ಡ್ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘ ಕೆಲಸ ಮಾಡುತ್ತಿದೆ ಎಂದರು.ಅಧಿಕಾರಿಗಳು, ಜನಪ್ರತಿನಿಧಿಗಳು ಸಹಾಯ ಸಹಕಾರ ಮಾಡಿದ್ದಾರೆ. ಜಂಟಿಯಾಗಿ ಸೌಹಾರ್ದಯುತವಾಗಿ ಆಟ ವೃತ್ತಿ ಪ್ರೌಢಿಮೆ ಬೆಳೆಸುತ್ತಿದೆ. ವೃತ್ತಿ ಜೀವನದಲ್ಲಿ ಒತ್ತಡದಿಂದ ಹೊರ ಬರಲು ಕ್ರೀಡಾಕೂಟ ಸಹಕಾರಿ ಯಾಗಿದೆ ಎಂದರು.

ಎಸ್ ಪಿ ಅರುಣಾಂಗ್ಸು ಗಿರಿ ಮಾತನಾಡಿ, 25 ವರ್ಷದ ಸಂಭ್ರಮದ ವಾತಾವರಣದಲ್ಲಿ ನಮ್ಮೆಲ್ಲರನ್ನು ಪಾಲ್ಗೊಳ್ಳುವಂತೆ ಮಾಡಿದ್ದು ಶ್ಲಾಘನೀಯ ಎಂದರು.

ಸಿಇಓ ಈಶ್ವರ ಕುಮಾರ ಕಾಂದೂ ಮಾತನಾಡಿ, ಇಂತಹ ಕ್ರೀಡಾಕೂಟಗಳ ಮೂಲಕ ಉಭಯ ವರ್ಗದವರ ರಿಕ್ರಿಯಷನ್ ಜೊತೆಗೆ ಒತ್ತಡ ತಗ್ಗಿಸಬಹುದು. ಮಾಧ್ಯಮದವರು ದೈಹಿಕ ಮಾನಸಿಕ ಆರೋಗ್ಯದ ಕಡೆಗೆ ಗಮನಹರಿಸಲು ಸಲಹೆ ಮಾಡಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಾಪಾತ್ರ ಮಾತನಾಡಿ, ಆಡಳಿತ ವಿಚಾರದಲ್ಲಿ ಮಾಧ್ಯಮ ಪ್ರಮುಖ ಪಾತ್ರ ವಹಿಸಲಿದೆ. ಆಡಳಿತದಲ್ಲಿ ಉತ್ತಮ ಕೆಲಸಕ್ಕೆ ಎಲ್ಲರಿಂದಲೂ ಸಹಕಾರ ಸಿಕ್ಕರೆ ಜನರಿಗೆ ಸೌಲಭ್ಯ ಕೊಡಲು ಅನುಕೂಲ ಆಗಲಿದೆ. ಆಟವನ್ನು ಖುಷಿಯಿಂದ ಕ್ರೀಡಾಸ್ಪೂರ್ತಿಯಿಂದ ಆಡಬೇಕು ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್ ಗುರುನಾಥ್

3ನೇಯ ಪುಟಕ್ಕೆ

ಕನ್ನಡ ಸಾಹಿತ್ಯ ಲೋಕಕ್ಕೆ ಬಶೀರ್ ಅಹ್ಮದ್ ಅವರ ಕೊಡುಗೆ ಅಪಾರ: ರಂಗಣ್ಣ ಪಾಟೀಲ್



ರಾಯಚೂರು: ಸೆ. 27

ಕನ್ನಡ ಭಾಷೆಯ ಮೇಲಿನ ಅಚಲ ಪ್ರೇಮ ಹಾಗೂ ಕನ್ನಡವನ್ನು ಪಸರಿಸುವ ಪ್ರಚಾರ ಕಾರ್ಯದಲ್ಲಿ ಮುಂಚೂಣಿಯಲ್ಲಿರುವ ರಾಯಚೂರಿನ ಹಿರಿಯ ಲೇಖಕ ಬಶೀರ್ ಅಹ್ಮದ್ ಹೊಸಮನಿ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆ ಅಪಾರ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು ಹೇಳಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಹೊಸಮನಿ ಪ್ರಕಾಶನ, ರಾಯಚೂರು ಇವರ ಸಹಯೋಗದೊಂದಿಗೆ ಭಾನುವಾರ ಬೆಳಗ್ಗೆ ನಗರದ ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ, ಬಶೀರ ಅಹ್ಮದ ಹೊಸಮನಿ ಅವರ ಐತಿಹಾಸಿಕ ನಾಟಕ ಕೃತಿಯಾದ 'ರಾಷ್ಟ್ರಕೂಟ ಸಾರ್ವಭೌಮರು' ಕೃತಿ ಜನಾರ್ಪಣೆ ಸಮಾರಂಭದಲ್ಲಿ ಉದ್ಘಾಟಕರಾಗಿ ಆಗಮಿಸಿ, ಮಾತನಾಡುತ್ತಾ, ರಾಷ್ಟ್ರಕೂಟರು ಮತ್ತು ಹಂಪಿಯ ವಿಜಯನಗರ ಸಾಮ್ರಾಜ್ಯಗಳ ಐತಿಹಾಸಿಕ ಹಿನ್ನೆಲೆಯಲ್ಲಿ ಹಾಗೂ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಕನ್ನಡಿಗರಿಗೆ ಹಾಗೂ ಕನ್ನಡ ಭಾಷೆಗೆ ಸಿಕ್ಕಿದ ಮನ್ನಣೆಯನ್ನು ಈ ಪುಸ್ತಕವು ಬಿಂಬಿಸುತ್ತದೆ. ಕಾವೇರಿಯಿಂದ ನರ್ಮದಾ ನದಿವರೆಗೆ ಅಂದರೆ ರಾಜಸ್ಥಾನದ ಉತ್ತರ ಭಾರತದವರೆಗೂ ವಿಜಯನಗರ ಹಾಗೂ ರಾಷ್ಟ್ರಕೂಟರ ಸಾಮ್ರಾಜ್ಯವು ವಿಸ್ತರಿಸಿದ್ದರ ಇತಿಹಾಸವನ್ನು ಈ ಕೃತಿಯು ತೆರೆದಿಡುತ್ತದೆ ಎಂದು ವಿವರಿಸಿದರು.

ನಂತರ ಬಶೀರ ಅಹ್ಮದ ಹೊಸಮನಿ ಅವರ ರಾಷ್ಟ್ರಕೂಟ ನಟಸಾರ್ವಭೌಮ ಕೃತಿ ಲೋಕಾರ್ಪಣೆ ಮಾಡಿದ ಯುವ ಕವಿಗಳು ಮತ್ತು ಸಾಹಿತಿಗಳಾದ ವೇಣು ಜಾಲಿಬೆಂಚಿಯವರು ಮಾತನಾಡುತ್ತಾ, ಐತಿಹಾಸಿಕ ನಾಟಕಗಳನ್ನು ರಚಿಸುವುದು ಸಾಮಾನ್ಯ ಕೃತಿಗಳ ರಚನೆಗಿಂತ ಬಹಳ ಸವಾಲಿನ ಮತ್ತು ಗಂಭೀರವಾದ ಕೆಲಸವಾಗಿದೆ. ಕೇವಲ ಕಲ್ಪನೆಯಾಧಾರಿತ ಕಾವ್ಯ ಅಥವಾ ಕಥೆಗಳನ್ನು ಬರೆಯುವುದಕ್ಕಿಂತ ಐತಿಹಾಸಿಕ ನಾಟಕ ರಚನೆಗೆ ಆ ಕಾಲಘಟ್ಟದ ಸೂಕ್ಷ್ಮತೆ, ಸಮಕಾಲೀನ ಸನ್ನಿವೇಶಗಳು ಮತ್ತು ಆಳವಾದ ಐತಿಹಾಸಿಕ ಜ್ಞಾನ ಅತ್ಯಗತ್ಯ ಎಂದು ಅವರು ತಿಳಿಸಿದರು. ಇತಿಹಾಸದ ಸತ್ಯತೆಯನ್ನು ಕಲಾತ್ಮಕವಾಗಿ ಕಟ್ಟುವುದು ದೊಡ್ಡ ಸವಾಲಾಗಿದ್ದರೂ, ಲೇಖಕರು ಇದನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಎಂದರು.

ನಂತರ ಕಾರ್ಯಕ್ರಮದಲ್ಲಿ ಕೃತಿ ಪರಿಚಯವನ್ನು ಮಾನ್ವಿಯ ಹಿರೇಕೊಟ್ನೇಕಲ್ ಗ್ರಾಮದ ಸಾಹಿತಿಗಳಾದ ಸರ್ವಮಂಗಳ ಓತೂರು ಅವರು ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ, ಸಾಹಿತಿಗಳಾದ ವೀರಹನುಮಾನ್ ಅವರು ಮಾತನಾಡುತ್ತಾ, ಅದಿಲ್ ಶಾಹಿಗಳು ಧಾರ್ಮಿಕ ಸಹಿಷ್ಣುತೆಯನ್ನು ಹೊಂದಿದ್ದವರು

3ನೇಯ ಪುಟಕ್ಕೆ

ಎಸ್‌ಐಆರ್ ಪ್ರಕ್ರಿಯೆಯ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು : ರವಿ ಪಾಟೀಲ್

ರಾಯಚೂರು: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಹಾಗೂ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ರಾಜ್ಯ ಕಾಂಗ್ರೆಸ್ ಮುಖಂಡ ರವಿ ಪಾಟೀಲ್ ಆಕ್ಷೇಪ ವ್ಯಕ್ತಪಡಿಸಿ, ಪ್ರಕ್ರಿಯೆಯ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಗೆ ದೇಶದ ವಿವಿಧ ವಿರೋಧ ಪಕ್ಷಗಳು ಮತ್ತು ನಾಗರಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸುತ್ತಿವೆ ಎಂದು ಹೇಳಿ, ಚುನಾವಣಾ ಆಯೋಗದ ನಿರ್ಧಾರಗಳಲ್ಲಿ ಮುಖ್ಯ



ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಪಾತ್ರದ ಕುರಿತು ಪ್ರಶ್ನೆಗಳನ್ನು ಎತ್ತಿದ್ದಾರೆ.

ಚುನಾವಣಾ ಆಯೋಗದ ಮೂವರು ಆಯುಕ್ತರಲ್ಲಿ ಇಬ್ಬರು ಆಯುಕ್ತರು ಕಳೆದ ಕೆಲ ತಿಂಗಳುಗಳಲ್ಲಿ ಆಯೋಗದ ಕೆಲವು ನಿರ್ಧಾರಗಳು ಮತ್ತು ಕ್ರಮಗಳ ಕುರಿತು ಲಿಖಿತ ಆಕ್ಷೇಪಗಳನ್ನು ದಾಖಲಿಸಿದ್ದಾರೆ ಎಂದು ಅವರು ಆರೋಪಿಸಿದರು.

ಎಸ್‌ಐಆರ್ ಪ್ರಕ್ರಿಯೆಯಿಂದ ಅನೇಕ ಅರ್ಹ ಮತದಾರರ ಹೆಸರುಗಳು ಮತದಾರರ ಪಟ್ಟಿಯಿಂದ ಹೊರಗುಳಿದಿವೆ ಎಂಬ ಆರೋಪಗಳು ಕೇಳಿಬರುತ್ತಿವೆ. ಈ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆಯೇ ಎಂಬುದರ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ರವಿ ಪಾಟೀಲ್ ಒತ್ತಾಯಿಸಿದರು.

ಚುನಾವಣಾ ಆಯೋಗವು ಸರ್ವಸಮ್ಮತಿಯ ತತ್ವದ ಆಧಾರದಲ್ಲಿ

3ನೇಯ ಪುಟಕ್ಕೆ

ಹಟ್ಟಿ ಗಣಿ ಕಾರ್ಮಿಕರ ಉಪವಾಸ ಸತ್ಯಾಗ್ರಹಕ್ಕೆ ಡಿವೈಎಫ್‌ಐ ಬೆಂಬಲ

ಹಟ್ಟಿ: ಸಿಐಟಿಯು ನೇತೃತ್ವದಲ್ಲಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘವು ಹಮ್ಮಿಕೊಂಡಿರುವ ಸರತಿ ಉಪವಾಸ ಸತ್ಯಾಗ್ರಹದ ಮೂರನೇ ದಿನದ ಹೋರಾಟಕ್ಕೆ ಡಿವೈಎಫ್‌ಐ ಮುಖಂಡರು ಬೆಂಬಲ ವ್ಯಕ್ತಪಡಿಸಿದರು.



ಹಟ್ಟಿ ಕ್ಯಾಂಪ್ ಪ್ರದೇಶದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಡಿವೈಎಫ್‌ಐ ಮುಖಂಡರು, ಅನುಕಂಪದ ಆಧಾರದ ನೇಮಕಾತಿಯಲ್ಲಿ ಮೃತ ಕಾರ್ಮಿಕರ ಮಕ್ಕಳ ವಿದ್ಯಾರ್ಹತೆಯನ್ನು ಪರಿಗಣಿಸಿ, ಅದಕ್ಕೆ ತಕ್ಕ ಹುದ್ದೆ ನೀಡಬೇಕು ಎಂದು ಆಗ್ರಹಿಸಿದರು.

ಗಣಿ ಹೊರತುಪಡಿಸಿ ಅಪಘಾತಕ್ಕೊಳಗಾದ ಕಾರ್ಮಿಕರಿಗೆ ಕಂಪನಿಯೇ ಗುಣಮಟ್ಟದ ಚಿಕಿತ್ಸೆ ನೀಡಬೇಕು. ಅಗತ್ಯವಿದ್ದರೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ರೆಫರ್ ಮಾಡುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರಸ್ತುತ ಇರುವ ಎರಡು ಬಾರಿ ರೆಫರ್ ಪದ್ಧತಿಯನ್ನು ರದ್ದುಪಡಿಸಿ ಜೀವಿತಾವಧಿ ರೆಫರ್ ಸೌಲಭ್ಯ ಕಲ್ಪಿಸಬೇಕು. ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಕಾರ್ಮಿಕರಿಗೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಹತೆಗೆ ಅನುಗುಣವಾಗಿ ಮುಂಬಡ್ತಿ

3ನೇಯ ಪುಟಕ್ಕೆ

ದೇಶದ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು: ಶಾಂತನಗೌಡ ಪಾಟೀಲ್ ದಿದ್ದಗಿ

ಲಿಂಗಸಗೂರು,ಸೆ.27–

ದೇಶದ ಇತಿಹಾಸ ಮತ್ತು ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕ ವೃತ್ತಿ ಸಾಮಾನ್ಯ ವೃತ್ತಿಯಲ್ಲ, ರಾಷ್ಟ್ರದ ಭವಿಷ್ಯ ರೂಪಿಸುವ ಶ್ರೇಷ್ಠ ಜವಾಬ್ದಾರಿಯಾಗಿದೆ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಶಾಂತನಗೌಡ ಪಾಟೀಲ್ ದಿದ್ದಗಿ ಹೇಳಿದರು.

ಪಟ್ಟಣದ ಶ್ರೀ ವಿಜಯಮಹಾಂತೇಶ್ವರ ಶಾಖಾ ಮಠದಲ್ಲಿ ತಾಲೂಕು ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ



ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು ಚಾಣಕ್ಯ, ವಿದ್ಯಾರಣ್ಯ, ಗುರು ಗೋವಿಂದ ಭಟ್ಟ ಸೇರಿದಂತೆ ಅನೇಕ ಮಹಾನ್ ಗುರುಗಳು ದೇಶ ಕಂಡ ಶ್ರೇಷ್ಠ ವ್ಯಕ್ತಿಗಳನ್ನು ರೂಪಿಸಿದ್ದಾರೆ. ರಾಷ್ಟ್ರಪತಿ, ಪ್ರಧಾನಿ, ವಿಜ್ಞಾನಿಗಳು ಸೇರಿದಂತೆ ಸಮಾಜದ ಉನ್ನತ ಹಂತದಲ್ಲಿರುವ ಸಾಧಕರ ಹಿಂದೆ ಶಿಕ್ಷಕರ ಮಾರ್ಗದರ್ಶನವಿದೆ ಎಂದರು.

ಅಲ್ಲದೆ, ಶಿಕ್ಷಕರು ಕೇವಲ ಪಾಠ ಬೋಧನೆಗೆ ಸೀಮಿತವಾಗದೆ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಾಧನೆಯ ಛಲ ಬೆಳೆಸಬೇಕು. ಬಡತನ ಸಾಧನೆಗೆ ಅಡ್ಡಿಯಲ್ಲ ಎಂಬುದಕ್ಕೆ ಲಾಲ್ ಬಹದ್ದೂರ್ ಶಾಸ್ತ್ರಿ ಹಾಗೂ ಕೆ.ಆರ್. ನಾರಾಯಣನ್ ಅವರ ಜೀವನವೇ ಸಾಕ್ಷಿ. ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವುದು ಶಿಕ್ಷಕರ ಕರ್ತವ್ಯ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದ ಮಾಜಿ ಶಾಸಕ ಡಿ.ಎಸ್. ಹೂಲಗೇರಿ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳು ಕೇವಲ ಲಾಭಕ್ಕಾಗಿ ಶಾಲೆ ನಡೆಸದೆ, ಭವ್ಯ ಭಾರತವನ್ನು ಕಟ್ಟುವಂತಹ ಮಕ್ಕಳನ್ನು ರೂಪಿಸುತ್ತಿವೆ. ಒಂದು ಕಾಲದಲ್ಲಿ ಶಿಕ್ಷಣಕ್ಕಾಗಿ ಬೇರೆ ಕಡೆಗೆ ಹೋಗಬೇಕಿದ್ದ ಪರಿಸ್ಥಿತಿ ಇತ್ತು. ಆದರೆ ಇಂದು ಲಿಂಗಸಗೂರು ಶೈಕ್ಷಣಿಕ ಹಬ್ ಆಗಿ ಬೆಳೆಯುತ್ತಿದ್ದು, ಸ್ಥಳೀಯವಾಗಿಯೇ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ ಎಂದರು.

ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ ಮಸ್ಕಿ ವಕೀಲರು ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ

3ನೇಯ ಪುಟಕ್ಕೆ

ಬರ ಪರಿಸ್ಥಿತಿ ಅಧ್ಯಯನ: ರಾಜ್ಯದಲ್ಲಿ ಅ.3ರಿಂದ ಕೇಂದ್ರ ಅಧಿಕಾರಿಗಳ ತಂಡ ಪ್ರವಾಸ

ಬೆಂಗಳೂರು: ರಾಜ್ಯದ ಬರ ಪರಿಸ್ಥಿತಿ ಅಧ್ಯಯನಕ್ಕಾಗಿ ಕೇಂದ್ರ ಅಧಿಕಾರಿಗಳ ತಂಡ ಅಕ್ಟೋಬರ್ 3ರಿಂದ 6ರವರೆಗೆ ರಾಜ್ಯದಲ್ಲಿ ಪ್ರವಾಸ ಕೈಗೊಳ್ಳಲಿದೆ.

ರಾಜ್ಯ ಸರ್ಕಾರ ಮೊದಲ ಹಂತದಲ್ಲಿ 101 ಬರ ತಾಲೂಕುಗಳ ಸಂಬಂಧ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮೆಮೊರಾಡಂ ಸಲ್ಲಿಕೆ ಮಾಡಿದೆ. ಈ ತಿಂಗಳಾಂತ್ಯಕ್ಕೆ ಮುಂಗಾರು ಹಂಗಾಮಿನ ರಾಜ್ಯದಲ್ಲಿನ ಇನ್ನಷ್ಟು ಹೆಚ್ಚುವರಿ ಬರಪೀಡಿತ ತಾಲೂಕುಗಳ ಸಂಬಂಧ ಪರಿಹಾರ ಕೋರಿ ಮೆಮೊರಾಡಂ ಸಲ್ಲಿಕೆ ಮಾಡಲಿದೆ. ಇದೀಗ ತೀವ್ರ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿಯ ನೈಜ ಸ್ಥಿತಿಗತಿ ಪರಿಶೀಲನೆಗಾಗಿ ಕೇಂದ್ರದ ಅಂತರ-ಸಚಿವಾಲಯಗಳ ಅಧಿಕಾರಿಗಳ ಅಧ್ಯಯನ ತಂಡ (ಐಎಂಸಿಟಿ) ಅಕ್ಟೋಬರ್ 3ರಿಂದ 6ರವರೆಗೆ ರಾಜ್ಯದಲ್ಲಿ ಪ್ರವಾಸ ಮಾಡಲಿದೆ.

ಅಕ್ಟೋಬರ್ 3ರಂದು ಬೆಂಗಳೂರಿಗೆ ಆಗಮನ: ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು 10 ಮಂದಿ ಅಧಿಕಾರಿಗಳನ್ನು ಒಳಗೊಂಡ ಈ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಕೃಷಿ ಇಲಾಖೆಯ ಜಂಟಿ ಕಾರ್ಯದರ್ಶಿ ಅಜೀತ್ ಕುಮಾರ್ ಸಾಹು 10 ಮಂದಿ ತಂಡದ ನೇತೃತ್ವ ವಹಿಸಲಿದ್ದಾರೆ. ಅಕ್ಟೋಬರ್ 3ರಂದು ಬೆಳಗ್ಗೆ ಬೆಂಗಳೂರಿಗೆ ಆಗಮಿಸಲಿರುವ ಕೇಂದ್ರ ತಂಡದ ಸದಸ್ಯರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕಂದಾಯ (ವಿಪತ್ತು ನಿರ್ವಹಣೆ) ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಪ್ರಾಥಮಿಕ ಸಭೆ ನಡೆಸಲಿದ್ದಾರೆ.

ಅಧ್ಯಯನದ ಬಳಿಕ ಕೇಂದ್ರ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಕೆ: ನಂತರ ನಿಗದಿತ ಜಿಲ್ಲೆಗಳಿಗೆ ತೆರಳಿ ರೈತರ ಜಮೀನುಗಳು ಮತ್ತು ಜಲಾಶಯಗಳಿಗೆ ಖುದ್ದು ಭೇಟಿ ನೀಡಿ, ಬೆಳೆ ನಷ್ಟದ ಪ್ರಮಾಣವನ್ನು ಅಂದಾಜಿಸಲಿದ್ದಾರೆ. ಮೂರು ತಂಡಗಳಾಗಿ ಅಧಿಕಾರಿಗಳ ನಿಯೋಗ ರಾಜ್ಯದ ವಿವಿಧ ಬರ ಪೀಡಿತ ತಾಲೂಕುಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಿದೆ. ಬರ ಅಧ್ಯಯನ ಮುಗಿದ ಬಳಿಕ ಕೇಂದ್ರ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಲಿದ್ದಾರೆ. ತಂಡ ನೀಡುವ ವರದಿ ಆಧಾರದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಬರ ಪರಿಹಾರ ಮಂಜೂರು ಮಾಡಲಿದೆ.

ಮೂರು ಉಪ ತಂಡಗಳಿಂದ ಪರಿಶೀಲನೆ: ಅಜೀತ್ ಕುಮಾರ್ ಸಾಹು ನೇತೃತ್ವದ ತಂಡ 1: ತುಮಕೂರು, ಚಿತ್ರದುರ್ಗ, ದಾವಣಗೆರೆ ಹಾಗೂ ವಿಜಯನಗರ ಜಿಲ್ಲೆಗಳಿಗೆ ಭೇಟಿ ನೀಡಲಿದೆ.

ಡಾ.ಸುದಮ್ ಬಾಗ್ ನೇತೃತ್ವದ ತಂಡ 2: ಹಾಸನ, ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಭೇಟಿ ಮಾಡಲಿದೆ. ಅಲ್ಲದೆ, ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟವನ್ನೂ ಪರಿಶೀಲನೆ ನಡೆಸಲಿದೆ.

ಡಾ.ಮಾನ್ ಸಿಂಗ್ ನೇತೃತ್ವದ ತಂಡ 3: ಈ ತಂಡವು ಯಾದಗಿರಿ, ರಾಯಚೂರು, ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳಿಗೆ ಭೇಟಿ ಕೊಡಲಿದೆ.



ಸೇವಾ ಸಂಕಲ್ಪ ಅಭಿಯಾನ: ಬಿಜೆಪಿಯಿಂದ ಅಂಗಳದ ಉತ್ಸವ

ಅಂಗನವಾಡಿ ಕಾರ್ಯಕರ್ತೆಯರ ಸನ್ಮಾನ, ಮಕ್ಕಳಿಗೆ ಹಣ್ಣು ವಿತರಣೆ: ಸಂವಾದ

ಬಾಗಲಕೋಟೆ ,ಸೆ.27-

ಅಂಗನವಾಡಿ ಮೂಲಕ ಪೌಷ್ಟಿಕ ಅಹಾರ ನೀಡಿ ಮಕ್ಕಳ ಸರ್ವಾಂಗಿಣ ಬೆಳವಣಿಗೆ ಹೊಂದಿ ಭಾರತದ ಉತ್ತಮ ಪ್ರಜೆಯಾಗುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಅನೇಕ ಯೋಜನೆಗಳ ಮೂಲಕ ಅಂಗನವಾಡಿಯಿಂದ ವಿಕಸಿತ ಭಾರತದಡೆ ಸಾಗುವಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಜನ ಅದರ ಸದೊಪಯೋಗ ಪಡಿಸಿಕೋಳ್ಳಿ ಎಂದು ವಿಧಾನ ಪರಿಷತ್ತಿನ ಮಾಜಿ ಶಾಸಕ ಅರುಣ ಶಹಾಪುರ ಹೇಳಿದರು.

ಅವರು ನಗರದ 9 ಹಾಗೂ 6 ಮತ್ತು 7 ನೇ ವಾರ್ಡಿನಲ್ಲಿರುವ ಅಂಗವಾಡಿ ಕೇಂದ್ರದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ಮಹಿಳಾ ಮೋರ್ಚಾ ವತಿಯಿಂದ ಹಮ್ಮಿಕೊಂಡ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆ ಮತ್ತು ಸಮರ್ಪಣೆಯನ್ನು ಸ್ಮರಿಸುವ 'ಸೇವಾ ಸಂಕಲ್ಪ ಅಭಿಯಾನ'ದ ಅಂಗವಾಗಿ ಅಂಗಳದ ಉತ್ಸವ ಕಾರ್ಯಕ್ರಮದಲ್ಲಿ 'ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿರಿಗೆ ಸನ್ಮಾನ ಮಾಡಿ ಮಕ್ಕಳಿಗೆ ಹಣ್ಣು ವಿತರಿಸಿ ಮಾತನಾಡಿರು.

ದೇಶದಾದ್ಯಂತ ಪೋಷಣ್ ಟ್ರ್ಯಾಕರ್‌ನಲ್ಲಿ ಕೋಟ್ಯಂತರ ಫಲಾನುಭವಿಗಳು ನೋಂದಾಯಿತರಾಗಿದ್ದು, ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ, ಮಿಷನ್



ಇಂದ್ರಧನುಷ್? ಹಾಗೂ 'ಪೋಷಣ್ ಭೀ, ಪಡಾಯಿ ಭೀ' ಸೇರಿದಂತೆ ವಿವಿಧ ಯೋಜನೆಗಳ ಮೂಲಕ ಮಹಿಳೆಯರು ಮತ್ತು ಮಕ್ಕಳಿಗೆ ನೆರವು ನೀಡಲಾಗುತ್ತಿದೆ ಈ ಮೂಲಕ ಭವ್ಯ ಭಾರತದ ಭಾವಿ ಪ್ರಜೆಗಳ ನಿರ್ಮಾಣಕ್ಕೆ ಪ್ರಧಾನಿ ಅಣಿಯಾಗಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಅವರು ಮಕ್ಕಳು, ಮಹಿಳೆಯರು ಸಶಕ್ತವಾದರೆ ಭಾರತ ಸಶಕ್ತವಾಗುತ್ತದೆ, ಈಗಾಗಿ ಅಂಗನವಾಡಿಯಿಂದ ವಿಕಸಿತ ಭಾರತ' ಎಂಬ ಆಶಯದೊಂದಿಗೆ ಸ್ಥಳೀಯ ಸೇವೆಗಳು, ಸಮುದಾಯದ ಸಕ್ರಿಯವಾಗಿ ಭಾಗವಹಿಸುವಿಕೆ ಹಾಗೂ ರಾಷ್ಟ್ರೀಯ ಸಂಕಲ್ಪವನ್ನು ಜೋಡಿಸುವ ಉದ್ದೇಶದಿಂದ ಸೆ. 25ರಿಂದ ಅ. 7ರವರೆಗೆ ಸ್ಥಳೀಯ ಯಶೋಗಾಥೆಗಳ ಮೂಲಕ ಸೇವೆ ಮತ್ತು ಸಂಕಲ್ಪದ ಕುರಿತು ಜಾಗೃತಿ ಮೂಡಿಸುವ ಅಭಿಯಾನ ನಡೆಯಲಿದೆ ಎಂದರು,

ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಮಕ್ಕಳಿಗೆ ಹಣ್ಣುಗಳನ್ನು ವಿತರಿಸಲಾಯಿತು. ಕೇಂದ್ರ ಸರ್ಕಾರದ ಪೌಷ್ಟಿಕತೆ, ಆರೋಗ್ಯ, ಮಹಿಳಾ ಕಲ್ಯಾಣ ಹಾಗೂ ಮಾತೃ-ಶಿಶು ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಯೋಜನೆಗಳ ಕುರಿತು ತಾಯಂದಿರು ಮತ್ತು ಮಕ್ಕಳಿಗೆ ಸರಳ ಹಾಗೂ ಸಂವಾದಾತ್ಮಕ ರೀತಿಯಲ್ಲಿ ಮಾಹಿತಿ ನೀಡಲಾಯಿತು.

ಇದೇ ಸಂಧರ್ಭದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಿಂದ ಪ್ರಯೋಜನ ಪಡೆದ ಮಹಿಳೆಯರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಅರ್ಹ ಫ'ಲಾನ'ುಭ'ವಿಗ'ಳ'ು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಾರ್ಯಕ್ರಮದಲ್ಲಿ ಸಲಹೆ ನೀಡಲಾಯಿತು.

ನಗರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಶಶಿಕಲಾ ಸುರೇಶ ಮಜ್ಜಗಿ, ಪ್ರೇಮಾ ಅಂಬಿಗೇರ, ಲಕ್ಷ್ಮೀ ಮಡಿವಾಳರ, ನಾಗರತ್ನಾ ಒಕ್ಕಲಕುಂಟಿ, ಶಿವಲೀಲಾ ಸಂಭನ್ನವರ, ವಿಯಜಲಕ್ಷ್ಮೀ ಭದ್ರಶೇಟ್ಟಿ, ನಾಗರತ್ನಾ ಹಡಗಲಿ, ಬೆಳಗಾವಿ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮೀನಾರಾಯ ಕಾಸಟ್, ನಗರಸಭೇ ಮಾಜಿ ಅಧ್ಯಕ್ಷ ದ್ಯಾವಪ್ಪ ರಾಕುಂಪಿ, ರಾಮಚಂದ್ರ ಸಗರ, ಮಲ್ಲಪ್ಪ ಕರಕಳ್ಳಿ, ಶಂಕರ ಗಲಗ, ಮಾನೇಶ ಅಂಬಿಗೇರ, ನಾಗಪ್ಪ ವಡಗೇರಿ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಈರಣ್ಣ ಕಲ್ಯಾಣಿ ಸರ, ಈರಣ್ಣ ಕಲಬುರಗಿ, ಶಂಕರ ಸಗರ, ಪರಶುರಾಮು ಡಾವಣಗೇರಿ, ಕಪ್ಪಯ್ಯ ಮುತ್ತಿನಮಠ, ನಾಗರಾಜ ನಾರಾಯಣಕರ, ಶಶಿಕುಮಾರ ಗುತ್ತನ್ನವರ, ಶ್ರೀಧರ ನಾಗರಬೇಟ್ಟ, ಉಮೇಶ ಹಂಚಿನಾಳ ಸೇರಿದಂತೆ ಪದಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ತಾಯಂದಿರು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

ಗ್ರಾಮೀಣ ಭಾಗದಲ್ಲಿ ಜಿಲ್ಲಾಧಿಕಾರಿಗಳು, ಜಿ.ಪಂ ಸಿಇಓ ಸಂಚಾರ: ಬರ ಪರಿಸ್ಥಿತಿಯ ಅವಲೋಕನ



ಕೊಪ್ಪಳ ಸೆ.27-

ಜಿಲ್ಲಾಧಿಕಾರಿಗಳಾದ ಡಾ. ಸುರೇಶ್ ಬಿ. ಹಿಟ್ನಾಳ್ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ವರ್ಣಿ ತ್ ನೇಗಿ ಅವರು ಸೆಪ್ಟೆಂಬರ್ 25 ರಂದು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಬರ ಪರಿಸ್ಥಿತಿಯ ಅವಲೋಕನೆ ಮಾಡಿದರು. ಬೆಳಿಗ್ಗೆ 10.30ಕ್ಕೆ ಕನಕಗಿರಿ ತಾಲೂಕಿನ ಹುಲಿಹೈದರ್ ಹೋಬ ಳಿಯ ಹುಲಿಹೈದರ್ ಗ್ರಾಮದ ರೈತ ದೊಡ್ಡಬಸಪ್ಪ ಕನ್ನಾಳ ಅವರ ಜಮೀನಿಗೆ ಭೇಟಿ ನೀಡಿ, ಅಲ್ಲಿನ ತೊಗರಿ ಬೆಳೆಯನ್ನು ಪರಿಶೀಲಿಸಿದರು. ಬಳಿಕ ಹನುಮನಾಳ ಗ್ರಾಮದ ರೈತ ಮೂಖಪ್ಪ ತಂದೆ ಕರಿಯಪ್ಪ ಅವರ ಹೊಲಕ್ಕೆ ತೆರಳಿ, ಸಜ್ಜೆ ಬೆಳೆಯ ವೀಕ್ಷಣೆ ಮಾಡಿದರು. ನಂತರ ಕನಕಗಿರಿ ಹೋಬಳಿಯ ತಿಪ್ಪನಾಳ ಗ್ರಾಮದ ರೈತ ಯಮ ನೂರಪ್ಪ ಅವರ ಕೃಷಿ ಭೂಮಿಯಲ್ಲಿನ ತೊಗರಿ ಬೆಳೆಯನ್ನು ಪರಿಶೀಲಿಸಿ ದರು. ಬಳಿಕ ಸುಳೇಕಲ್ ಗ್ರಾಮದ ರೈತ ಕನಕಪ್ಪ ಅವರ ಹೊಲದಲ್ಲಿ ಸೂರ್ಯಕಾಂತಿ ಬೆಳೆ ವೀಕ್ಷಣೆ ನಡೆಸಿದರು.

ಇದೇ ವೇಳೆ ಜಿಲ್ಲಾಧಿಕಾರಿಗಳು ರೈತರೊಂದಿಗೆ ಮಾತನಾಡಿ, ಬರ ಪರಿಸ್ಥಿತಿಯಿಂದ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸಿದರು. ಬೆಳೆ ಹಾನಿಗೆ ಪರಿಹಾರ ಹಾಗೂ ಬೆಳೆ ವಿಮೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ನಂತರ ಕನಕಗಿರಿ ಹೋಬಳಿ ವ್ಯಾಪ್ತಿಯ ಕಲಕೇರಾ ಕೆರೆಗೆ ಭೇಟಿ ನೀಡಿ, ವಿಬಿಜಿರಾಮ್ ಜೀ ಯೋಜ ನೆಯಡಿ ನಡೆಯುತ್ತಿರುವ ಕೆರೆ ಹೂಳೆತ್ತುವ ಕಾಮಗಾರಿಯ ವೀಕ್ಷಣೆ ಮಾಡಿ ಕೂಲಿಕಾರರಿಂದ ಮಾಹಿತಿ ಯನ್ನು ಪಡೆದರು. ಈ ಸಂದರ್ಭದಲ್ಲಿ ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ ಕೃಷ್ಣ ಮೂರ್ತಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಕೃಷ್ಣ ಉಕ್ಕುಂದ, ಕನಕಗಿರಿ ತಹಶೀಲ್ದಾರರಾದ ಚಂದ್ರಶೇಖರ್ ಗಾಳಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ರಾಜಶೇಖರ್, ಸಹಾಯಕ ನಿರ್ದೇ ಶಕರಾದ ನಾಗೇಶ್ ಎಚ್. ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ರೈತರು ಉಪಸ್ಥಿತರಿದ್ದರು.



ಸ್ವಚ್ಛತೆ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕರೆ

ಬಾಗಲಕೋಟೆ,ಸೆ.27-

ಸ್ವಚ್ಛತೆಯ ಮಹತ್ವದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ತಾಲೂಕಿನ ಬೇವೂರ ಗ್ರಾಮದ ಪರಪ್ಪ ಸಜ್ಜನ್ ಪದವಿ ಮಹಾವಿದ್ಯಾಲ ಯದಲ್ಲಿ ಸ್ವಚ್ಛತಾ ಹಿ ಸೇವಾ ಅಭಿ ಯಾನ ಕಾರ್ಯಕ್ರಮ ಜರುಗಿತು.

ಬಾಗಲಕೋಟೆ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ

ಮ'ಹಾವಿದ್ಯಾಲಯ'ದ' ಸಿಬ್ಬಂದಿಗೆ ಸ್ವಚ್ಛತೆಯ ಮಹತ್ವ, ವೈಯಕ್ತಿಕ ಹಾಗೂ ಸಾರ್ವಜನಿಕ ಸ್ವಚ್ಛ ತೆಯನ್ನು ಕಾಪಾಡುವ ಜವಾಬ್ದಾರಿ ಕುರತು ಅರಿವು ಮೂಡಿಸಲಾಯಿತು. ಈ ವೇಳೆ ಸ್ವಚ್ಛತೆಯ ಕುರಿತು ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಅರ್ಹ ಯುವಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲಾಯಿತು. 18 ವರ್ಷ ಪೂರ್ಣಗೊಳಿಸಿದ ಅರ್ಹರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡು ತಮ್ಮ ಪ್ರಜಾಪ್ರಭುತ್ವದ ಹಕ್ಕನ್ನು ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಲಾಯಿತು.

ಸ್ವಚ್ಛತೆ ಹಾಗೂ ಜವಾಬ್ದಾರಿಯುತ ಮತದಾರರ ನೋಂದಣಿ ಮೂಲಕ ಸ್ವಚ್ಛ ಜಾಗೃತ ಮತ್ತು ಸಕ್ರಿಯ ಸಮಾಜಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ತಾ.ಪಂ ಇಓ ಸುಭಾಷ ಸಂಪಗಾವಿ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕಾ ಪಂಚಾಯತಿಯ ಸಹಾಯಕ ನಿರ್ದೇಶಕ ಪರಮೇಶ್ವರ ಚಲವಾದಿ, ವಿಬಿಜಿರಾವ್‌ಜಿಯ ಎಡಿಪಿಆರ್ ನಕ್ಕರಗುಂದಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಭೀಮಪ್ಪ ಇಟಗಿ ಹಾಗೂ ಕಾಲೇಜಿನ ಮುಖ್ಯಸ್ಥರು, ವಿದ್ಯಾರ್ಥಿಗಳು, ಗ್ರಾಮ ಪಂಚಾಯತ ಸಿಬ್ಬಂದಿಗಳು ಹಾಜರಿದ್ದರು.

ಕೃಷಿ ಉತ್ಪನ್ನಗಳ ರಫ್ತಿಗೆ ಗುಣಮಟ್ಟ, ಬ್ರ್ಯಾಂಡಿಂಗ್ ಅತ್ಯಗತ್ಯ

ಕೊಪ್ಪಳ,ಸೆ.27-

ಕೃಷಿ ಉತ್ಪನ್ನಗಳ ರಫ್ತಿಗೆ ಗುಣಮಟ್ಟ ಹಾಗೂ ಬ್ರ್ಯಾಂಡಿಂಗ್ ಅತ್ಯಗತ್ಯವಾಗಿದೆ ಎಂದು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ತಿಮ್ಮಣ್ಣ ಚವಡಿ ಹೇಳಿದರು.

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಬೆಂಗಳೂರಿನ 'ಅಪೇಡ' ಸಹಯೋಗದಲ್ಲಿ ಕೊಪ್ಪಳ ಕೃಷಿ ವಿಸ್ತರಣ ಶಿಕ್ಷಣ ಕೇಂದ್ರದಲ್ಲಿ ಗುರುವಾರ (ಸೆ. 24ರಂದು) ಆಯೋಜಿಸಲಾಗಿದ್ದ ಕೃಷಿ ಉತ್ಪನ್ನಗಳ ರಫ್ತು : ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯದ ಅವಕಾಶಗಳು ಕುರಿತ ರೈತ ಉತ್ಪಾದಕ ಕಂಪನಿ ಹಾಗೂ ಕೇಂದ್ರಗಳ ಬಲವರ್ಧನೆಯ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ತಮ್ಮ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಯೋಗ್ಯ ಬೆಲೆ ಪಡೆಯಬೇಕಾದರೆ ವಿಜ್ಞಾನಿಗಳ ಸಲಹೆಯಂತೆ ಗುಣಮಟ್ಟದ ಹಾಗೂ ರಫ್ತು ಮಾಡಲು ಯೋಗ್ಯವಾದ ಬೆಳೆಗಳನ್ನು ಬೆಳೆಯುವುದು ಇಂದಿನ ತುರ್ತು ಅಗತ್ಯವಾಗಿದೆ. ಕೃಷಿ ವಿಶ್ವವಿದ್ಯಾಲಯದಿಂದ ರೈತರಿಗೆ



ನಿರಂತರವಾಗಿ ಬಿಜಿಡಿ-111 ಕಡಲೆ ಮತ್ತು ಟಿಎಸ್-3ಆರ್ ತೊಗರಿ ಬೀಜ ವಿತರಣೆಯಂತಹ ಹಲವು ರೈತಪರ ಕಾರ್ಯಕ್ರಮಗಳನ್ನು ರೂಪಿಸಲಾ ಗಿದೆ. ರೈತರು ಕೇವಲ ಬೆಳೆಗಳಿಗೆ ಸೀಮಿತವಾಗದೆ ಮೀನುಗಾರಿಕೆ, ರೇಷ್ಮೆಯಂತಹ ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಆರ್ಥಿಕ ಸಬಲತೆ ಸಾಧಿಸಬೇಕು ಎಂದರು.

ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಕೃಷ್ಣಮೂರ್ತಿ ಮಾತನಾಡಿ, ರೈತರ ಉತ್ಪನ್ನಗಳಿಗೆ ರಫ್ತು ಮಾರುಕಟ್ಟೆ ಒದಗಿಸುವುದು, ಬ್ರ್ಯಾಂಡಿಂಗ್ ಮಾಡುವುದು ಹಾಗೂ ಮೌಲ್ಯ ವರ್ಧನೆ ಮಾಡುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇದಕ್ಕಾಗಿ ಅಪೇಡ ಸಂಸ್ಥೆ ಅಧಿಕಾರಿಗಳು ಇಲ್ಲಿಗೆ ಬಂದು ಮಾಹಿತಿ ನೀಡುತ್ತಿರುವುದು ಒಂದು ಉತ್ತಮ ಬೆಳವಣಿಗೆಯಾಗಿದೆ. ಕೊಪ್ಪಳ ಜಿಲ್ಲೆ ಉತ್ತಮ ವಾತಾವರಣವನ್ನು ಹೊಂದಿದ್ದು, ತುಂಗಭದ್ರಾ ಕಾಲುವೆಯನ್ನು ಹೊಂದಿದ ಜಿಲ್ಲೆಯ ಬಹುಭಾಗ ಕಾಲುವೆ ನೀರಾವರಿಯನ್ನು ಹೊಂದಿರುವುದರಿಂದ ತೋಟಗಾರಿಕೆ ಬೆಳೆಗಳನ್ನು ಯಶಸ್ವಿಯಾಗಿ ಬೆಳೆಯಲಾಗುತ್ತಿದೆ. ಇವುಗಳಿಗೆ ರಫ್ತು ಮಾರುಕಟ್ಟೆ ಒದಗಿಸುವುದಕ್ಕಾಗಿ ಮುಂದಿನ ದಿನಗಳಲ್ಲಿ ಶೀತಲಗ್ರಹ, ಸಂಗ್ರಹಣ ಕೊಠಡಿಗಳು ಆಧುನಿಕ ಪದ್ಧತಿಯಲ್ಲಿ ನಿರ್ಮಿಸಲು ಸಂಸ್ಥೆಯಿಂದ ಮಾರ್ಗದರ್ಶನ ನೀಡಬೇಕೆಂದು ಅಪೇಡ ಕಂಪನಿ ಯವರಿಗೆ ತಿಳಿಸಿದರು. ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಕೃಷ್ಣ ಉಕ್ಕುಂದ ಅವರು ಮಾತನಾಡಿ, ಕೊಪ್ಪಳದ ಕೇಸರ ಮಾವು ಉತ್ತಮ ಬ್ರ್ಯಾಂಡ್ ಮೌಲ್ಯ ಹೊಂದಿದ್ದು, ಈಗಾಗಲೇ ವಿದೇಶಗಳಿಗೆ ರಫ್ತಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಅತಿಯಾದ ರಾಸಾಯನಿಕ ಬಳಕೆಯಿಂದಾಗಿ ರಫ್ತಾದ ಮಾವು ವಾಪಸ್ ಬಂದಿರುವುದು ಆತಂಕಕಾರಿ. ಜಾಗತಿಕ ಮಾರುಕಟ್ಟೆಯ ನಿಯಮಾವಳಿಗಳಿಗೆ ಅನುಗುಣವಾಗಿ ರಾಸಾಯನಿಕ ಮುಕ್ತ ಗುಣಮಟ್ಟದ ಉತ್ಪನ್ನಗಳನ್ನು ಬೆಳೆಯಬೇಕಿದೆ. ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ಹೈಟೆಕ್ ರೈಸ್ ಪಾರ್ಕ್ ಹಾಗೂ ತೋಟಗಾರಿಕೆ ಪಾರ್ಕ್‌ನಲ್ಲಿ ಉತ್ಪನ್ನಗಳ ರಾಸಾಯನಿಕ ಅವಶೇಷ ಪರೀಕ್ಷೆಗೆ ಲ್ಯಾಬ್ ನಿರ್ಮಿಸಲು ಅಪೇಡ ಸಂಸ್ಥೆ ಮುಂದಾಗಬೇಕು ಎಂದು ಹೇಳಿ ದರು.

ಕಾರ್ಯಾಗಾರದಲ್ಲಿ ಬೆಂಗಳೂರು ಅಪೇಡ ಸಂಸ್ಥೆಯ ಅಭಿವೃದ್ಧಿ ವ್ಯವಸ್ಥಾಪಕರಾದ ಕಾರಂತ್ ಬಿ., ರಫ್ತು ನಿಯಮಗಳ ಬಗ್ಗೆ ಮಾಹಿತಿ ನೀಡಿ, ಅಪೇಡದಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ರೈತರು ಸುಲಭವಾಗಿ ತಮ್ಮ ಉತ್ಪನ್ನಗಳನ್ನು ರಫ್ತು ಮಾಡಬಹುದು. ಮೂಲ ಸೌಕರ್ಯ ನಿರ್ಮಾಣ, ಸಂಗ್ರಹಣಾ ಘಟಕ, ಗ್ರೇಡಿಂಗ್, ಬ್ರ್ಯಾಂಡಿಂಗ್ ಮತ್ತು ಪ್ಯಾಕಿಂಗ್‌ಗಾಗಿ ನೋಂದಾಯಿತ ಸದಸ್ಯರಿಗೆ ಶೇ. 75 ರಷ್ಟು ಸಹಾಯಧನ ಹಾಗೂ ಮೂರು ದಿನಗಳ ಉಚಿತ ತರಬೇತಿ ಸೌಲಭ್ಯ ಲಭ್ಯವಿದೆ ಎಂದು ವಿವರಿಸಿದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಪಿ.ಆರ್. ಬದರಿ ಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ರಫ್ತು ಮತ್ತು ಮೌಲ್ಯ ವರ್ಧನೆಗೆ ಮುಕ್ತ ಅವಕಾಶಗಳಿದ್ದು, ರೈತರು ಇಂತಹ ತರಬೇತಿಗಳ ಲಾಭ ಪಡೆಯಬೇಕೆಂದು ತಿಳಿಸಿದರು.

ಸಾವಯವ ಕೃಷಿಕರಾದ ಆನಂದ ತೀರ್ಥ ಪ್ಯಾಟಿ ಇಸ್ರೇಲ್ ಮತ್ತು ಥೈಲ್ಯಾಂಡ್ ದೇಶಗಳ ಮಾರುಕಟ್ಟೆ ಗುಣಮಟ್ಟದ ಕುರಿತು ಅನುಭವ ಹಂಚಿಕೊಂಡರು.

ನೂರಕ್ಕೂ ಹೆಚ್ಚು ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ರೈತರೊಂದಿಗೆ ಸಂವಾದ ಗೋಷ್ಠಿ ನಡೆಯಿತು. ತೋಟಗಾರಿಕೆ ಸಂಪನ್ಮೂಲ ವ್ಯಕ್ತಿ ವಾಮನ ಮೂರ್ತಿ ಅವರು ಕಾರ್ಯಕ್ರಮ ನಿರೂಪಿಸಿದರು.

ಹಗರಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ 'ರೈತ-ವಿಜ್ಞಾನಿಗಳ ಸಂವಾದ'

ಕೃಷಿಯೇತರ ಚಟುವಟಿಕೆಗಳ ಮೂಲಕ ಸಬಲೀಕರಣಕ್ಕೆ ಜಂಟಿ ಕೃಷಿ ನಿರ್ದೇಶಕ ಕೆ.ಎಂ. ಸೋಮಸುಂದರ್ ಕರೆ

ಬಳ್ಳಾರಿ,ಸೆ.27-

ಪ್ರಸ್ತುತ ಎಲ್‌ನಿನೋ ಪ್ರಭಾವದಿಂದಾಗಿ ಮಳೆ ಕಡಿಮೆಯಾಗಿದ್ದು, ಬಿತ್ತನೆ ಪ್ರಮಾಣ ಕುಂಠಿತಗೊಂಡು ಕೃಷಿ ಬೆಳೆ ಉತ್ಪಾದಕತೆಗೆ ಹಿನ್ನಡೆಯಾಗಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ರೈತರು ಕೇವಲ ಸಾಂಪ್ರದಾಯಿಕ ಕೃಷಿಯನ್ನೇ ಅವಲಂಬಿಸದೆ, ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಎಂ. ಸೋಮಸುಂದರ್ ಅವರು ಹೇಳಿದರು.

ಗುರುವಾರ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಇಲಾಖೆ ಹಾಗೂ ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಹಗರಿ ಇವರ ಸಂಯುಕ್ತ ಆಶ್ರಯ ದಲ್ಲಿ 'ಆತ್ಮ' ಯೋಜನೆಯಡಿ ಹಮ್ಮಿಕೊಂಡಿದ್ದ ರೈತ-ವಿಜ್ಞಾನಿಗಳ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು 'ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ಯಮ ಯೋಜನೆ'ಯನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬೇಕು ಎಂದು ಕರೆ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯ



ಸ್ಥರು ಹಾಗೂ ಮಣ್ಣು ವಿಜ್ಞಾನಿ ಡಾ. ರವಿ ಎಸ್. ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಬೆಳೆಗಳಿಗೆ ಅಗತ್ಯವಿರುವ ಪೋಷಕಾಂಶ ಹಾಗೂ ಸಾವಯವ ಗೊಬ್ಬರವನ್ನು ಸಮರ್ಪಕವಾಗಿ ನಿರ್ವಹಿಸುವುದು ಮುಖ್ಯ. ಸಾಂಪ್ರ ದಾಯಿಕ ಕೃಷಿ ಪದ್ಧತಿಗೆ ಮಾತ್ರ ಸೀಮಿತವಾಗದೆ, ಉತ್ಪನ್ನಗಳಿಗೆ ಮೌಲ್ಯವರ್ಧನೆ ನೀಡುವುದು ಹಾಗೂ ಸ್ವಯಂ ಉದ್ಯೋಗದತ್ತ ಹೆಜ್ಜೆ ಇಡುವುದರಿಂದ ಉತ್ತಮ ಆರ್ಥಿಕ ಪ್ರಗತಿ ಸಾಧಿಸಬಹುದು ಎಂದು ತಿಳಿಸಿದರು.

ತಾಂತ್ರಿಕ ಅಧಿವೇಶನದಲ್ಲಿ ತಜ್ಞರ ಸಲಹೆಗಳು:

ಡಾ. ಗಿರೀಶ್ (ತಳಿ ಸಂಶೋಧಕರು): ಜೋಳ, ಸಿರಿಧಾನ್ಯ ಮತ್ತು ಕುಸುಬೆ ಬೀಜಗಳ ನೂತನ ತಳಿಗಳ ಮಹತ್ವವನ್ನು ವಿವರಿಸಿ, ಈ ಧಾನ್ಯಗಳನ್ನು ನೇರವಾಗಿ ಮಾರಾಟ ಮಾಡದೆ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದರು.

ಡಾ. ಶಿಲ್ಪಾ (ಗೃಹ ವಿಜ್ಞಾನಿ): ಮಹಿಳೆಯರು ಬಟ್ಟೆ, ಕಿರಾಣಿ, ಟೈಲರಿಂಗ್, ಉಪ್ಪಿನಕಾಯಿ ತಯಾರಿಕೆ, ಕುರಿ ಸಾಕಾಣಿಕೆ, ಎರೆಹುಳು ಗೊಬ್ಬರ (ವರ್ಮಿಕಂಪೋಸ್ಟ್) ತಯಾರಿಕೆಯಂತಹ ಕಿರು ಉದ್ದಿಮೆಗಳನ್ನು ಪ್ರಾರಂಭಿಸಲು ಸಲಹೆ ನೀಡಿದರು. ಆಹಾರ ಉತ್ಪನ್ನ ಮಾರಾಟಕ್ಕೆ ಲ್ಯಾಬ್ ಟೆಸ್ಟ್, ಎಫ್‌ಎಸ್‌ಎಸ್‌ಎಐ ಪರವಾನಗಿ ಹಾಗೂ ಗುಣಮಟ್ಟದ ಪ್ಯಾಕಿಂಗ್ ಮತ್ತು ಲೇಬಲಿಂಗ್ ಕಡ್ಡಾಯ ಎಂದು ವಿವರಿಸಿದರು.

ಡಾ. ಲೋಕೇಶ್ (ಬೀಜ ವಿಜ್ಞಾನಿ): ರಾಗಿ, ಸಿರಿಧಾನ್ಯಗಳ ಮೌಲ್ಯ ವರ್ಧನೆಯ ಮಹತ್ವ ವಿವರಿಸುತ್ತಾ, ರೊಟ್ಟಿಗೆ ಅತ್ಯಂತ ಸೂಕ್ತವಾದ 'ಆರ್‌ಟಿಎಸ್-43' ಜೋಳದ ತಳಿಯ ಬಗ್ಗೆ ಮಾಹಿತಿ ನೀಡಿದರು. ಸ್ವಸಹಾಯ ಸಂಘಗಳ ಮೂಲಕ ಅಣಬೆ, ಉಪ್ಪಿನಕಾಯಿ ತಯಾರಿಕೆಯಿಂದ ಮಹಿಳೆಯರು ಸಬಲೀಕರಣಗೊಳ್ಳಬಹುದು ಎಂದರು.

ಡಾ. ನವೀನ್ (ವಿಜ್ಞಾನಿ): ಯಾವುದೇ ಉದ್ಯಮವನ್ನು ಪ್ರಾರಂಭಿಸುವ ಮುನ್ನ ಸೂಕ್ತ ತರಬೇತಿ ಪಡೆದು ಕೌಶಲ್ಯ ಬೆಳೆಸಿಕೊಳ್ಳುವಂತೆ ತಿಳಿಸಿ, 'ಸ್ವಚ್ಛತೆಯೇ ಸೇವೆ' ಅಭಿಯಾನದ ಆಶಯವನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಶ್ರೀಧರ ಗಡ್ಡೆ ಗ್ರಾಮದ ತ್ರಿವೇಣಿ ಸಂಗಮ ಮಹಿಳಾ ಸ್ವಸಹಾಯ ಸಂಘದ ಸದಸ್ಯೆ ಬಸಮ್ಮ ಅವರು ಅಣಬೆ ಬೇಸಾಯ ಮತ್ತು ರೊಟ್ಟಿ ತಯಾರಿಕೆ ಮೂಲಕ ಆರ್ಥಿಕವಾಗಿ ಸಬಲರಾದ ತಮ್ಮ ಯಶೋಗಾಥೆಯನ್ನು ಹಂಚಿ ಕೊಂಡರು.

ಬಳ್ಳಾರಿ: ಬರಪೀಡಿತ ಜಿಲ್ಲೆಯ ರೈತರ ಸಾಲ ಮರುರಚನೆಗೆ ಸೂಚನೆ

ಬಲವಂತದ ವಸೂಲಾತಿ ನಡೆಸಿದರೆ ಕಠಿಣ ಕ್ರಮ-ಡಿಸಿ



ಬಳ್ಳಾರಿ,ಸೆ.27-

ಜಿಲ್ಲೆಯ ಎಲ್ಲಾ 5 ತಾಲೂಕುಗಳನ್ನು ತೀವ್ರ ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದ್ದು, ಸಂಕಷ್ಟದಲ್ಲಿರುವ ಅನ್ನದಾತರ ಕೆಸಿಸಿ ಹಾಗೂ ಅವಧಿ ಸಾಲಗಳನ್ನು ಮರುರಚನೆ ಮಾಡುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು ಬ್ಯಾಂಕರ್‌ಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಗುರುವಾರ ನಡೆದ ಬರಗಾಲ ಕುರಿತ ವಿಶೇಷ ಜಿಲ್ಲಾ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾ ಡಿದರು.

ಸಾಲ ಮರುಪಾವತಿಗೆ 60 ತಿಂಗಳ ಕಾಲಾವಕಾಶ:

ರೈತರ ಸಾಲಗಳನ್ನು ಮರುರಚಿಸಿ, 12 ತಿಂಗಳ ಮೊರಟೋರಿಯಂ (ಮರುಪಾವತಿ ರಿಯಾಯಿತಿ) ಅವಧಿಯೊಂದಿಗೆ ಒಟ್ಟು 60 ತಿಂಗಳುಗಳಲ್ಲಿ (ಮೊರಟೋರಿಯಂ ಅವಧಿ ಒಳಗೊಂಡಂತೆ) ಮರುಪಾವತಿಸಲು ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು.

ಸ್ವಯಂ-ಪ್ರೇರಿತ ಮರುರಚನೆ:

27.08.2026 ರ ವೇಳೆಗೆ 30 ದಿನಗಳಿಗಿಂತ ಕಡಿಮೆ ಅವಧಿಯ ಬಾಕಿ ಹೊಂದಿರುವ ಎಲ್ಲಾ 'ಸ್ಟ್ಯಾಂಡರ್ಡ್' ಸಾಲಗಳಿಗೆ ಸ್ವಯಂ-ಪ್ರೇರಿತವಾಗಿ ಮರುರಚನೆ ಪ್ರಕ್ರಿಯೆ ಕೈಗೊಳ್ಳಬೇಕು ಎಂದರು.

ರೈತರ ಮೇಲೆ ಒತ್ತಡ ಹೇರುವಂತಿಲ್ಲ: ಸಾಲ ಮರುಪಾವತಿಗಾಗಿ ರೈತರಿಗೆ ಯಾವುದೇ ರೀತಿಯ ಕಿರುಕುಳ ಅಥವಾ ಒತ್ತಡ ಹೇರಬಾರದು. ಬೆಳೆ ವಿಮೆ ಪರಿಹಾರ ಬಿಡುಗಡೆಯಾಗುವವರೆಗೆ ಕಾಯದೆ ಅರ್ಹ ರೈತರಿಗೆ ಹೊಸ ಸಾಲಗಳನ್ನು ವಿತರಿಸಬೇಕು ಎಂದು ಸೂಚಿಸಿದರು.

ಖಾಸಗಿ ಲೇವಾದೇವಿದಾರರ ಹಾವಳಿಗೆ ಕಡಿವಾಣ:

ಬರಗಾಲದ ಸಂದರ್ಭದಲ್ಲಿ ರೈತರು ತಮ್ಮ ಆರ್ಥಿಕ ಅಗತ್ಯಗಳಿಗಾಗಿ ಸೂಕ್ಷ್ಮ ಹಣಕಾಸು ಸಂಸ್ಥೆಗಳು ಅಥವಾ ಖಾಸಗಿ ಲೇವಾದೇವಿಗಾರರ ಬಲೆಗೆ ಬೀಳದಂತೆ ಬ್ಯಾಂಕ್‌ಗಳು ಮುನ್ನೆಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು.

ನ್ಯಾಯಾಲಯದ ಆದೇಶಗಳಿದ್ದರೂ ಮಾಹಿತಿ ಕಡ್ಡಾಯ:

ರೈತರ ವಿರುದ್ಧ ಯಾವುದೇ ನ್ಯಾಯಾಲಯದ ಆದೇಶಗಳಿದ್ದರೂ, ಅವುಗಳನ್ನು ಜಾರಿಗೊಳಿಸುವ ಮುನ್ನ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾಡಳಿತದ ಗಮನಕ್ಕೆ ತರಬೇಕು ಎಂದರು.

ಬಲವಂತದ ವಸೂಲಾತಿಗೆ ಸಿಇಓ ಎಚ್ಚರಿಕೆ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿ ಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಯಾವುದೇ ಬ್ಯಾಂಕ್ ರೈತರ ವಿರುದ್ಧ ಬಲವಂತದ ಸಾಲ ವಸೂಲಾತಿ ಕ್ರಮಗಳನ್ನು ಕೈಗೊಂಡರೆ ಅಂತಹ ಬ್ಯಾಂಕರ್‌ಗಳನ್ನು ವಿಚಾರಣೆಗೆ ಒಳಪಡಿಸಲಾಗುವುದು. ನಿಯಮ ಉಲ್ಲಂಘಿಸುವವರ ವಿರುದ್ಧ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ಗಮನಕ್ಕೆ ತಂದು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಎಲ್ಲಾ ಪ್ರಕ್ರಿಯೆಗಳ ಪ್ರಗತಿಯನ್ನು ಸಾಪ್ತಾಹಿಕವಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಎಲ್‌ಡಿಎಂ ಗಿರೀಶ್ ಕುಲಕರ್ಣಿ, ನಬಾರ್ಡ್ ಡಿಡಿಎಂ ಯುವರಾಜ್, ಎಸ್‌ಬಿಐ ಆರ್‌ಎಂ ರವಿ ಬಿ. ಮೇಶ್ರಾಮ್, ಸಿಬಿಆರ್‌ಸೆಟಿ ನಿರ್ದೇಶಕ ವಿನೋದ್ ಕೊಲ್ಲೂರುಮಠ, ಪಶುಪಾಲನಾ ಹಾಗೂ ತೋಟಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಬ್ಯಾಂಕ್ ಸಂಯೋಜಕರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ ಪತ್ರಕರ್ತರ, ವಿವಿಧ ಇಲಾಖೆ ಅಧಿಕಾರಿಗಳ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಗೆ ಡಿಸಿ ಪೂವಿತಾ ಎಸ್ ಚಾಲನೆ

ಮಾತನಾಡಿ, 25 ವರ್ಷ ಅನೇಕ ಚಟುವಟಿಕೆಗಳನ್ನು ಮಾಡುತ್ತ ಬಂದಿದೆ. ಸುದ್ದಿಯ ಜಂಜಾಟದಲ್ಲಿರುವ ನಾವು ಎಲ್ಲಾ ಪತ್ರಕರ್ತರು ಆಟದಲ್ಲಿ ತೊಡಗಿಸಿಕೊಂಡು ಕ್ರೀಡಾಸ್ಫೂರ್ತಿಯಿಂದ ಪಾಲ್ಗೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಮಾತನಾಡಿ, ಬೆಳ್ಳಿ ಮಹೋತ್ಸವದ ಹಿನ್ನೆಲೆಯಲ್ಲಿ ನಾನಾ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ರಾಜ್ಯ ಮಟ್ಟದ ಕಥೆ ಕವನ ಸ್ಪರ್ಧೆ, ಜಿಲ್ಲೆಯ ಹೋರಾಟಗಳ ಕುರಿತು ಪುಸ್ತಕ ರೂಪದಲ್ಲಿ ಹೊರತರುತ್ತಿದ್ದೇವೆ. ಅದರ ಮುಂದುವರಿದ ಭಾಗವಾಗಿ ಇಂದು ಸೌಹಾರ್ದ ಪಂದ್ಯ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದಯ್ಯ ಕುಕನೂರು,ನಿಕಟಪೂರ್ವ ಅಧ್ಯಕ್ಷ ಚೆನ್ನಬಸವಣ್ಣ ಇದ್ದರು. ಗಿಲ್ಡ್ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಹೂಗಾರ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು, ಹಿರಿಯ ಕಿರಿಯ ಪತ್ರಕರ್ತರು ಇದ್ದರು.

ಕನ್ನಡ ಸಾಹಿತ್ಯ ಲೋಕಕ್ಕೆ ಬಶೀರ್ ಅಹ್ಮದ್ ಅವರ ಕೊಡುಗೆ ಅಪಾರ: ರಂಗಣ್ಣ ಪಾಟೀಲ್

ಹಾಗೂ ವಿಜಯನಗರದ ಮೇಲೆ ಆಕ್ರಮಣ ಮಾಡಿದರೂ ಕೂಡ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಬದುಕಿಗೆ ಅವರು ನೀಡಿದ ಕೊಡುಗೆ ಅಪಾರವಾದುದು.ಮಹಿಪಾಲ ದಾಸರ ಕುರಿತಾದ ನಾಟಕದಲ್ಲಿ ಅವರು ಅರಮನೆಯ ಬಾಜುವೇ ನರಸಿಂಹ ದೇವರ ದೇವಸ್ಥಾನ ಕಟ್ಟಿಸಿ ಪ್ರವಚನ ನೀಡಿ, ಎಲ್ಲ ಮೌಢ್ಯಗಳನ್ನು ಹೋಗಲಾಡಿಸಲು ಆಜ್ಞೆ ಹೊರಡಿಸಿದ ಪ್ರಸಂಗ ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಒಟ್ಟಾರೆಯಾಗಿ, ಈ ಹೊಸ ನಾಟಕವು ಕನ್ನಡ ಸಾಹಿತ್ಯ ಮತ್ತು ರಂಗಭೂಮಿ ಲೋಕಕ್ಕೆ ಮತ್ತೊಂದು ಮೌಲ್ಯಯುತ ಸೇರ್ಪಡೆಯಾಗಿದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ, ಡಾ. ಬಿ. ವಿಜಯ ರಾಜೇಂದ್ರ, ವಹಿಸಿ, ಮಾತಾನಾಡುತ್ತಾ, ಐತಿಹಾಸಿಕ ಈ ನಾಟಕವು ತುಂಬಾ ಉತ್ತಮವಾಗಿ ಮೂಡಿ ಬಂದಿದೆ ಇದರಲ್ಲಿ ಸಾಮಾನ್ಯ ಮತ್ತು ವಿಶಿಷ್ಟ ಶೈಲಿಯಲ್ಲಿ ನಾಟಕವು ನಿರೂಪಣೆಯಾಗಿದೆ. ಇಲ್ಲಿ ಕಟಾಲಿ, ಉಂಬಾಕ, ಮೂಳ ಎಂಬ ಗ್ರಾಮೀಣ ಪದಗಳನ್ನು ಬಳಸಿದ್ದು ಈ ನೆಲದ ಸೊಗಡನ್ನು ಕಾಣಬಹುದು. ಜೊತೆಗೆ ಗಾದೆ ಮಾತುಗಳು, ನವರಸಗಳು, ಸಂಭಾಷಣೆಗಳು ಸ್ವಗತ ತಂತ್ರಗಳು, ಉತ್ತಮವಾಗಿ ಮೂಡಿ ಬಂದಿದೆ.

ಸಮಾರಂಭದ ವೇದಿಕೆಯ ಮೇಲೆ ಕವಿಗಳಾದ ತಿಮ್ಮಯ್ಯ ರಾಯಚೂರಕರ್, ಸಿರವಾರ ತಾಲ್ಲೂಕಿನ ಮಾಡಗಿರಿ ಗ್ರಾಮದ ಮುಖಂಡರಾದ ನಟರಾಜ್ ಪಾಟೀಲ್, ಸಿರವಾರ ತಾಲೂಕಿನ ಮಾದಗಿರಿ ಗ್ರಾಮದ ಟಿಪ್ಪು ಸುಲ್ತಾನ್ ಯುವಸೇನೆಯ ಅಧ್ಯಕ್ಷರಾದ ಹುಸೇನ್ ಭಾಷಾ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಐತಿಹಾಸಿಕ ನಾಟಕದ ಕೃತಿಕಾರರಾದ ಬಶೀರ್ ಅಹ್ಮದ್ ಹೊಸಮನಿ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದು, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವೇದಿಕೆಯ ಮೇಲೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ರಾವುತರಾವ್ ಬರೂರ ಅವರು ಉಪಸ್ಥಿತರಿದ್ದು ಸರ್ವರನ್ನು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಹಾಗೂ ಹೊಸಮನಿ ಪ್ರಕಾಶನದ ಪದಾಧಿಕಾರಿಗಳು, ಸಾಹಿತಿಗಳು, ಕನ್ನಡದ ಆಸಕ್ತರು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಪದಾಧಿಕಾರಿಗಳಾದ ವೈಶಾಲಿ ಪಾಟೀಲ್ ಅವರು ನಡೆಸಿಕೊಟ್ಟರು.

ಹಟ್ಟಿ ಗಣಿ ಕಾರ್ಮಿಕರ ಉಪವಾಸ ಸತ್ಯಾಗ್ರಹಕ್ಕೆ ಡಿವೈಎಫ್ಐ ಬೆಂಬಲ

ನೀಡಬೇಕು. 44 ತಿಂಗಳ ಹಿಂಬಾಕಿ ವೇತನ ಪಾವತಿ ಸೇರಿದಂತೆ ಕಾರ್ಮಿಕರ ಎಲ್ಲ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆ.29ರಂದು ಹಮ್ಮಿಕೊಂಡಿರುವ ಹಟ್ಟಿ ಚಿನ್ನದ ಗಣಿ ಕಂಪನಿ ಬಂದ್‌ಗೆ ಡಿವೈಎಫ್ಐ ಹಟ್ಟಿ ಹೋಬಳಿ ಘಟಕ ಸಂಪೂರ್ಣ ಬೆಂಬಲ ನೀಡುವುದಾಗಿ ಮುಖಂಡರು ಘೋಷಿಸಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ಮುಖಂಡರಾದ ರಿಯಾಜ್ ಖುರೇಷಿ, ಇಮ್ರಾನ್, ಫಯಾಜ್, ಕಾಸಿನಾಥ್, ಸಲ್ಮಾನ್, ವಸೀಮ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ದೇಶದ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು: ಶಾಂತನಗೌಡ ಪಾಟೀಲ್ ದಿದ್ದಗಿ

ಅನಗತ್ಯ ನಿಯಮಗಳನ್ನು ಹೇರಿ ಸವಾರಿ ಮಾಡಬಾರದು. ಸರ್ಕಾರಿ ಶಾಲೆಗಳಂತೆ ಖಾಸಗಿ ಶಾಲೆಗಳಿಗೂ ಒಂದೇ ಕಾನೂನು ಇರಬೇಕು. ಅತ್ಯಲ್ಪ ವೇತನಕ್ಕೆ ಸೇವೆ ಸಲ್ಲಿಸುವ ಖಾಸಗಿ ಶಾಲಾ ಶಿಕ್ಷಕರಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ () ಅನುದಾನದಿಂದ ಕನಿಷ್ಠ 5 ಲಕ್ಷ ರೂಪಾಯಿ ಆರೋಗ್ಯ ವಿಮೆ ಜಾರಿಗೊಳಿಸಬೇಕು ಮತ್ತು ಸರ್ಕಾರಿ ಶಿಕ್ಷಕರಂತೆ ಖಾಸಗಿ ಶಿಕ್ಷಕರನ್ನೂ ಗುರುತಿಸಿ ಪ್ರಶಸ್ತಿ ನೀಡಬೇಕು ಎಂದು ಒತ್ತಾಯಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳ 76 ಉತ್ತಮ ಶಿಕ್ಷಕರಿಗೆ 'ಉತ್ತಮ ಶಿಕ್ಷಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಇದೇ ವೇಳೆ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶಿವರಾಜ ಕೆಂಭಾವಿ, ಪತ್ರಕರ್ತ ಹನುಮಂತ ಕನ್ನಾಳ ಹಾಗೂ ನಿವೃತ್ತ ಜಿಲ್ಲಾ ದೈಹಿಕ ಪರಿವೀಕ್ಷಣಾಧಿಕಾರಿಗಳಾದ ರುದ್ರಮುನಿ ಸ್ವಾಮಿ ರಾಜಗುರು ಅವರನ್ನು ಸನ್ಮಾನಿಸಲಾಯಿತು.

ನಂದವಾಡಗಿ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ದೇವರಭೂಪುರದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಮಾರಂಭದಲ್ಲಿ ಒಕ್ಕೂಟದ ತಾಲೂಕು ಅಧ್ಯಕ್ಷ ನರಸಪ್ಪ ಯಾದವ್, ಜಿಲ್ಲಾ ಸಹ ಕಾರ್ಯದರ್ಶಿ ಟಿ ಬಸವರಾಜ್, ಜಿಲ್ಲಾ ಉಪಾಧ್ಯಕ್ಷರಾದ ಶಾಂತಗೌಡ ಪಾಟೀಲ ದಿದ್ಗಿ , ಶರ್ಫುದ್ದಿನ್ ಪೋತ್ನಾಳ್ , ಚಂದ್ರಶೇಖರ್ ಬಲ್ಲಟಗಿ, ಡಾ.ಸಿದ್ಧರಾಮಪ್ಪ ಸಾಹುಕಾರ, ಸಂಜೀವ್ ಕುಮಾರ್ ಕಂದಗಲ್, ಮಂಜುನಾಥ ಸ್ವಾಮಿ ತೋರಣದಿನ್ನಿ, ಆದಯ್ಯ ದಳಪತಿ, ಶಿವಕುಮಾರ್ ಎನ್, ಮಾರೆಪ್ಪ ಕೊತ್ತದೊಡ್ಡಿ, ಶಂಕರ್ ಲಿಂಗಯ್ಯ ತಾತ, ವಿನಯ್ ಕುಮಾರ್ ಗಣಾಚಾರಿ, ಶಿವರಾಜ್ ಕೆಂಭಾವಿ, ಉದಯ್ ಕುಮಾರ್ ಕಂಬಾರ, ಡಾ ಸಂಜೀವ್ ಕುಮಾರ, ಮಹಿಬೂಬ್ ಕಂದಗಲ್, ಪಿಜಿ ಪವಾರ್,ಕೆ.ವಿ.ರೆಡ್ಡಿ, ಡಾ. ಅಂಬಿಕಾ ಮಟಗಲ್, ಸುಭಾಷಿಣಿ, ರಜಬಲಿ ನದಾಫ್, ಶಂಕರಗೌಡ ಗೌಡ್ರ, ಕೆಂಚಪ್ಪ ಬಾವಿಮನಿ, ಬಸವರಾಜ ಕೊಡ್ಲಿ, ಡಾ. ಗಂಗಾಧರಯ್ಯ ಸ್ವಾಮಿ, ಮಲ್ಲಿಕಾರ್ಜುನ ಕಳಸದಗುಡಿ, ಗವಿಸಿದ್ದಪ್ಪ ಗೌಡುರ, ಮಹಮ್ಮದ್ ಫಜಲ್, ಖಾಜಾ ಹುಸೇನ್, ಬಸವರಾಜ ಬಡಿಗೇರ, ಅಮರೇಶ, ಇನ್ನಿತರ ಒಕ್ಕೂಟದ ಪದಾಧಿಕಾರಿಗಳು ಹಾಗೂ ಹಲವು ಪ್ರಮುಖರು ಉಪಸ್ಥಿತರಿದ್ದರು.

ಎಸ್ಐಆರ್ ಪ್ರಕ್ರಿಯೆಯ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು : ರವಿ ಪಾಟೀಲ್

ಕಾರ್ಯನಿರ್ವಹಿಸಬೇಕು. ಆಯೋಗದ ಕಾರ್ಯವೈಖರಿ ಪಾರದರ್ಶಕವಾಗಿರಬೇಕು ಹಾಗೂ ಮತದಾರರ ಸಾಂವಿಧಾನಿಕ ಹಕ್ಕುಗಳಿಗೆ ಯಾವುದೇ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಮತದಾರರ ಹಕ್ಕುಗಳ ರಕ್ಷಣೆಗೆ ಎಲ್ಲರೂ ಧ್ವನಿ ಎತ್ತಬೇಕು. ಎಸ್ಐರ್ಆ ಪ್ರಕ್ರಿಯೆ ಮತ್ತು ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಕೇಳಿಬಂದಿರುವ ಆರೋಪಗಳ ಬಗ್ಗೆ ಪಾರದರ್ಶಕ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರವಿ ಪಾಟೀಲ್ ಆಗ್ರಹಿಸಿದ್ದಾರೆ.

ರಾಜ್ಯದ 17 ಜಿಲ್ಲೆಗಳಲ್ಲಿ ಮುಂದಿನ 4 ದಿನ ಭಾರೀ ಮಳೆ

ಬೆಂಗಳೂರು,ಸೆ.27–
ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತಗೊಂಡಿದೆ. ಪರಿಣಾಮ, ಕರ್ನಾಟಕದ 17 ಜಿಲ್ಲೆಗಳಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ವ್ಯಾಪಕವಾಗಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಅಲ್ಲದೆ, 6 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ವಿಶೇಷವಾಗಿ, ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಮಳೆ ಅಬ್ಬರ ಹೆಚ್ಚಿರಲಿದ್ದು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಿಗೆ ಹವಾಮಾನ ಇಲಾಖೆ 'ಯೆಲ್ಲೋ ಅಲರ್ಟ್' ಘೋಷಿಸಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಿಡಿಲು ಸಹಿತ ಭಾರೀ ಮಳೆಯಾಗಲಿದೆ. ನದಿಗಳ ನೀರಿನ ಮಟ್ಟ ಹೆಚ್ಚಾಗುವ ಹಾಗೂ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವ ಸಾಧ್ಯತೆಗಳಿವೆ ಎಂದು ಇಲಾಖೆ ಹೇಳಿದೆ. ಸ್ಥಳೀಯ ಆಡಳಿತ ಮತ್ತು ಸಾರ್ವಜನಿಕರಿಗೆ ಸೂಕ್ತ ಎಚ್ಚರಿಕೆ ವಹಿಸಲು ಸೂಚಿಸಿದೆ.

ಬಳ್ಳಾರಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ

ನವೆಂಬರ್ ನಂತರ ನೀರಿನ ಅಭಾವ ಸಾಧ್ಯತೆ-ಡಿಸಿ



ಬಳ್ಳಾರಿ,ಸೆ.27–
ಕಳೆದ ವರ್ಷಕ್ಕೆ ಹೋಲಿಸಿದರೆ ತುಂಗಭದ್ರ ಜಲಾಶಯದಲ್ಲಿ ನೀರಿನ ಸಂಗ್ರಹ ಸುಮಾರು 3.5 ರಿಂದ 4 ಟಿಎಂಸಿಯಷ್ಟು ಕಡಿಮೆಯಿದೆ. ಹೀಗಾಗಿ ನವೆಂಬರ್ ನಂತರ ಕುಡಿಯುವ ನೀರಿಗೆ ಸಮಸ್ಯೆ ಎದುರಾಗಬಹುದು. ಆದಕಾರಣ ಪರ್ಯಾಯ ಯೋಜನೆ ರೂಪಿಸಿಟ್ಟುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನವೆಂಬರ್ ನಂತರ ನೀರಿನ ಲಭ್ಯತೆ ಕಡಿಮೆಯಾಗಲಿದ್ದು, ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಕುಡಿ ಯುವ ನೀರಿನ ಬೇಡಿಕೆ ತೀವ್ರಗೊಳ್ಳ ಲಿದೆ. ಹೀಗಾಗಿ, ಕುಡಿಯುವ ನೀರಿ ಗಾಗಿ ಕಾಲುವೆಗೆ ನೀರು ಹರಿಸಲು ಯೋಜನೆ ರೂಪಿಸಿಕೊಳ್ಳಬೇಕು, ಇದರಿಂದ ಏಪ್ರಿಲ್ ಅಂತ್ಯದವರೆಗೆ ನಿರ್ವಹಿಸಲು ಸಾಧ್ಯವಾಗುತ್ತದೆ. ಮುಂದಿನ ವರ್ಷ ಜುಲೈ 15ರವರೆಗಿನ ನೀರಿನ ಅವಶ್ಯಕತೆಯ ಸಂಪೂರ್ಣ ನೀಲನಕ್ಷೆಯನ್ನು ಸಿದ್ಧಪಡಿಸಲು ನಿರ್ದೇಶನ ನೀಡಿದರು.

ಪ್ರಸ್ತುತ ಮೊದಲ ಬೆಳೆಗೆ ಬಹುತೇಕ ನೀರು ಲಭ್ಯವಾಗಲಿದೆ. ಮಳೆಯಾಗದಿದ್ದರೆ ಎರಡನೇ ಬೆಳೆಗೆ ನೀರು ದೊರೆಯುವ ಸಂಭವ ಕಡಿಮೆಯಿದೆ. ಈ ವಾಸ್ತವ ಪರಿಸ್ಥಿತಿಯನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ರೈತರೊಂದಿಗೆ ಸಭೆ ನಡೆಸಿ ಮನವರಿಕೆ ಮಾಡಿಕೊ ಡಬೇಕು. ಕಾಲುವೆ ನೀರನ್ನೇ ನಂಬಿ ಎರಡನೇ ಬೆಳೆ ಅಥವಾ ದೀರ್ಘಾವಧಿ ಬೆಳೆಗಳನ್ನು ಬೆಳೆಯದಂತೆ ರೈತರಿಗೆ ಸ್ಪಷ್ಟ ಮಾಹಿತಿ ನೀಡುವಂತೆ ಸೂಚಿ ಸಿದರು.

ರಾಜ್ಯ ಸರ್ಕಾರದಿಂದ ಬರ ಪರಿಹಾರವಾಗಿ ಅರ್ಹ ರೈತರಿಗೆ ಮೊದಲ ಹಂತದಲ್ಲಿ ಪರಿಹಾರ ನೀಡುವ ಘೋಷಣೆಯಾಗಿದ್ದು, ಜಿಲ್ಲೆಯಲ್ಲಿ ಬರ ಘೋಷಣೆ ಆಗಿರುವ ತಾಲ್ಲೂಕುಗಳ ಎಲ್ಲಾ ರೈತರಿಗೂ ಇದನ್ನು ತಲುಪಿಸುವ ಕಾರ್ಯ ಪ್ರಾರಂಭಿಸಬೇಕು. ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕ ರೈತರಿದ್ದು, ಅದಕ್ಕೆ ಬೇಕಾಗುವ ಮೊತ್ತ ವನ್ನು ಸರಿಯಾಗಿ ಲೆಕ್ಕಹಾಕಬೇಕು. ಡಿ.ಸಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ನಿಯಮಾನುಸಾರ ಕುಡಿಯುವ ನೀರು ಮತ್ತು ತುರ್ತು ಪರಿಹಾರ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ತಾಲ್ಲೂಕುವಾರು ಮೇವು ಕಿಟ್ ವಿತರಣೆ: ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗದಂತೆ ಒಟ್ಟು 10,475 ಮೇವು ಮಿನಿ ಕಿಟ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಬಳ್ಳಾರಿ-2,649 ಕಿಟ್, ಸಿರುಗುಪ್ಪ-2,389 ಕಿಟ್, ಸಂಡೂರು-3,241 ಕಿಟ್, ಕುರುಗೋಡು-1,123 ಕಿಟ್ ಹಾಗೂ ಕಂಪ್ಲಿ- 1,073 ಕಿಟ್‌ಗಳನ್ನು ವಿತರಿಸಲಾಗುವುದು. ಸೋಮವಾರದ ವೇಳೆಗೆ ಕಿಟ್ ಗಳು ಜಿಲ್ಲೆಗೆ ಬರಲಿದ್ದು, ನೀರಿನ ಸೌಲಭ್ಯ ಹಾಗೂ ಜಾನುವಾರುಗಳನ್ನು ಹೊಂದಿರುವ ಅರ್ಹ ರೈತರ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಬಂದ ಒಂದೆರಡು ದಿನಗಳಲ್ಲೇ ವಿತರಣೆ ಪೂರ್ಣಗೊಳಿಸಲಾಗುವುದು ಎಂದು ಪಶು, ಸಂಗೋಪನಾ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ತಹಶೀಲ್ದಾರ್ ನೇತೃತ್ವದ ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿಗಳು ನಿಯಮಿತವಾಗಿ ಸಭೆಗಳನ್ನು ನಡೆಸಿ, ಕುಡಿಯುವ ನೀರು ಮತ್ತು ಮೇವಿನ ಸಮಸ್ಯೆಗಳ ಬಗ್ಗೆ ತಕ್ಷಣವೇ ಸ್ಪಂದಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಎಲ್-ನಿನೋ ಪ್ರಭಾವದಿಂದಾಗಿ ಮಳೆ ಮಾದರಿ ಹದಗೆಟ್ಟಿದ್ದು, ಈಶಾನ್ಯ ಮುಂಗಾರು ಸಹ ದುರ್ಬಲಗೊಳ್ಳುವ ಸಾಧ್ಯತೆಯಿದೆ. ಫೆಬ್ರವರಿ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆಯ ದಿನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎಲ್ಲಾ ಸ್ಥಳೀಯ ಸಂಸ್ಥೆಗಳು, ತಾಲೂಕು ಪಂಚಾಯಿತಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ತಕ್ಷಣವೇ ಮುನ್ನೆಚ್ಚರಿಕಾ ಕ್ರಿಯಾಯೋಜನೆ ಸಿದ್ಧಪಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಒಟ್ಟು 1,25,044 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಮಳೆ ಕೊರತೆ ಹಾಗೂ ತೀವ್ರ ಬರದಿಂದಾಗಿ 67,235 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಮೆಕ್ಕೆಜೋಳ ಹಾಗೂ ವಿಶೇಷವಾಗಿ ಹತ್ತಿ ಬೆಳೆಗೆ ಭಾರಿ ಹೊಡೆತ ಬಿದ್ದಿದೆ. ಹತ್ತಿ ಗಿಡಗಳು ಬೆಳವಣಿಗೆ ಕುಂಠಿತಗೊಂಡು ಹಾನಿಗೊಳಗಾಗಿವೆ. ಬೆಳೆಹಾನಿ ಪರಿಹಾರ ಹಾಗೂ ಬೆಳೆವಿಮೆ ವಿಷಯದಲ್ಲಿ ಕೃಷಿ ಮತ್ತು ತೋಟ ಗಾರಿಕೆ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ತೋರುವಂತಿಲ್ಲ. ವಿಮಾ ಕ್ಲೈಮ್‌ಗಳು ರೈತರಿಗೆ ತಲುಪುವಂತೆ ಮಾಡಲು ವಿಮಾ ಕಂಪನಿಗಳ ವಿರುದ್ಧ ದೃಢ ನಿಲುವು ತಳೆಯಬೇಕು. ಕೇವಲ ಪತ್ರ ವ್ಯವಹಾರ ಅಥವಾ ದೂರವಾಣಿ ಕರೆಗಳಿಗೆ ಸೀಮಿತವಾಗದೆ, ಬೆಂಗಳೂ ರಿನಲ್ಲಿ ಕೃಷಿ ಇಲಾಖೆಯ ಕಾರ್ಯ ದರ್ಶಿಗಳನ್ನು ಖುದ್ದು ಭೇಟಿಯಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ರೈತರಿಗೆ ನ್ಯಾಯ ಒದಗಿಸಬೇಕು ಎಂದು ಸೂಚಿಸಿದರು.

ಕುರುಗೋಡು ತಾಲೂಕಿನ ಪ್ರಮುಖ ಬೆಳೆಯಾದ ಮೆಣಸಿನ ಕಾಯಿಯನ್ನು ಗ್ರೌಂಡ್ ಟ್ರೂಥಿಂಗ್ ವರದಿಯಲ್ಲಿ ಸೇರಿಸದೇ ಇರುವುದಕ್ಕೆ ಹಿರಿಯ ಅಧಿಕಾರಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕೃಷಿ ಇಲಾಖೆ ಅಧಿಕಾರಿಗಳು, ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಕುರು ಗೋಡು ಭಾಗದಲ್ಲಿ ನಾಟಿ ಪ್ರಕ್ರಿಯೆ ತಡವಾಗಿದ್ದರಿಂದ ವರದಿಯಲ್ಲಿ ದಾಖಲಾಗಿಲ್ಲ ಎಂದು ತಿಳಿಸಿದರು. ಆದರೆ ಈ ವರದಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ರವಾನೆ ಯಾಗಿರುವು ದರಿಂದ, ಮುಂದೆ ಕೇಂದ್ರ ಅಧ್ಯಯನ ತಂಡ ಭೇಟಿ ನೀಡಿದಾಗ ಕುರುಗೋಡು ಮೆಣಸಿನಕಾಯಿ ಬೆಳೆ ಹಾನಿಯ ನೈಜ ಚಿತ್ರಣವನ್ನು ಪ್ರತ್ಯೇಕವಾಗಿ ಅವರ ಮುಂದೆ ಸಮರ್ಥವಾಗಿ ಪ್ರಸ್ತುತಪಡಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದಾಗಿ ಸರಾಸರಿ ಶೇ. 50ಕ್ಕೂ ಹೆಚ್ಚು ಇಳುವರಿ ನಷ್ಟ ಸಂಭವಿಸಿದೆ. ಜಿಲ್ಲೆಯಾದ್ಯಂತ ಸುಮಾರು 50,000ಕ್ಕೂ ಹೆಚ್ಚು ರೈತರು 8.7 ಕೋಟಿ ರೂ.ಗಳಿಗೂ ಅಧಿಕ ಪ್ರೀಮಿಯಂ ಮೊತ್ತವನ್ನು ಬೆಳೆ ವಿಮೆಗೆ ಪಾವತಿಸಿದ್ದು, ರೈತರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಮಾತನಾಡಿ, ಜಿಲ್ಲೆಯಲ್ಲಿ ಈವರೆಗೆ ಒಟ್ಟು 94 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿದ್ದು, ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳ ಗುರುತಿಸುವಿಕೆ ಹಾಗೂ ಲಾರ್ವಾ ಸರ್ವೇ ಕಾರ್ಯ ಚುರುಕಿನಿಂದ ಕೈಗೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳು ನಿಯಮಿತವಾಗಿ ವಾರ್ಡ್‌ಗಳಲ್ಲಿ 7-8 ದಿನಗಳಿಗೊಮ್ಮೆ ಫಾಗಿಂಗ್ ಪ್ರಕ್ರಿಯೆಯನ್ನು ಮರುಕಳಿಸಬೇಕು ಎಂದು ಸೂಚಿಸಿದರು.

ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮನೆ-ಮನೆಗೆ ತೆರಳಿ ಸೊಳ್ಳೆ ಉತ್ಪತ್ತಿ ತಡೆಗಟ್ಟುವ ಕುರಿತು ಜಾಗೃತಿ ವಿಡಿಯೋಗಳನ್ನು ಸಿದ್ಧಪಡಿಸಿ ಜನರಿಗೆ ತಲುಪಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ್, ಡಿಯುಡಿಸಿ ಪಿಡಿ ಅಬ್ದುಲ್ ರೆಹಮಾನ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

ಹಿರಿಯರನ್ನು ಗೌರವದಿಂದ ಕಾಣುವುದು ಪ್ರತಿಯೊಬ್ಬರ ಕರ್ತವ್ಯ



ಬಳ್ಳಾರಿ,ಸೆ.25–
ಪ್ರಸ್ತುತದಲ್ಲಿ ಹಿರಿಯರು ಮಾನಸಿಕ ಹಿಂಸೆಗೆ ಒಳಗಾಗುತ್ತಿದ್ದು, ಸಮಾಜದಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಹಾಗಾಗಿ ಕಿರಿಯರು ಹಿರಿಯರಿಗೆ ಗೌರವ ನೀಡುವುದರ ಮೂಲಕ ಮಾನವೀಯ ಮೌಲ್ಯಗಳನ್ನು ವೃದ್ಧಿಗೊಳಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ನಗರದ ಬಿಎಂಸಿಆರ್‌ಸಿ ಮೈದಾನದಲ್ಲಿ ಹಿರಿಯ ನಾಗರಿಕರಿಗಾಗಿ ಗುರುವಾರ ಹಮ್ಮಿಕೊಂಡಿದ್ದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಹಿಂದೆ ಕಿರಿಯರು ಹಿರಿಯರ ಮಾತುಗಳಿಗೆ ಹೆಚ್ಚಿನ ಗೌರವ ನೀಡುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಕಿರಿಯರು ಹಿರಿಯರಿಗೆ ಸೂಕ್ತ ಗೌರವ ನೀಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪೋಷಕರ ಪ್ರೀತಿಯನ್ನು ಅರ್ಥೈಸಿಕೊಂಡು ಅವರನ್ನು ಉತ್ತಮವಾಗಿ ಆರೈಕೆ ಮಾಡಿದಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿರಿಯರಿಗೆ ಯಾವುದೇ ಸಮಸ್ಯೆಗಳಿದ್ದರೂ ಕಾನೂನು ನೆರವು ನೀಡಲು ಇಲಾಖೆ ಸದಾ ಸಿದ್ಧವಿದೆ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ನಮ್ಮ ಇಲಾಖೆ ನಿಮ್ಮ ಬೆಂಬಲಕ್ಕಿದ್ದು, ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ಒದಗಿಸಲಾಗುವುದು. ಹಿರಿಯರ ಆಚಾರ-ವಿಚಾರಗಳು ಇಂದಿನ ಯುವ ಪೀಳಿಗೆಗೆ ಮಾರ್ಗದರ್ಶಿಯಾಗಿದ್ದು, ಅವರನ್ನು ಕಡೆಗಣಿಸದೆ ಪ್ರೀತಿ-ಗೌರವದಿಂದ ನೋಡಿಕೊಳ್ಳಬೇಕು ಎಂದರು.

ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು: ದಿನಾಚರಣೆಯ ಅಂಗವಾಗಿ ಹಿರಿಯ ನಾಗರಿಕರಿಗಾಗಿ (ಪುರುಷ ಮತ್ತು ಮಹಿಳೆಯರಿಗೆ) ಬಿರುಸಿನ ನಡಿಗೆ, ಮ್ಯೂಸಿಕಲ್ ಚೇರ್, ಬಕೆಟ್‌ನಲ್ಲಿ ಚೆಂಡು ಎಸೆಯುವ ಕ್ರೀಡಾ ಸ್ಪರ್ಧೆಗಳು ಹಾಗೂ ಗಾಯನ ಮತ್ತು ಏಕಪಾತ್ರಾಭಿನಯದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಆರಂಭದಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಗಂಗಾಧರಯ್ಯ ಪ್ರಾರ್ಥನೆ ನೆರವೇರಿಸಿದರು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಾದ ಗೋವಿಂದಪ್ಪ ಹೆಚ್.ಎಂ. ಎಲ್ಲರನ್ನೂ ಸ್ವಾಗತಿಸಿದರು. ಚಂಗಾರೆಡ್ಡಿ ಬುದ್ಧಿಮಾಂದ್ಯ ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಕೆ.ಹೆಚ್. ಗುರು ಮೂರ್ತಿ ಕಾರ್ಯಕ್ರಮ ನಿರೂಪಿಸಿ ದರು. ವೇದಿಕೆಯಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತ ದಲಿತ ಸಾಹಿತಿ ಎನ್.ಡಿ. ವೆಂಕಮ್ಮ, ನಿರಾಶ್ರಿತರ ಪರಿಹಾರ ಕೇಂದ್ರದ ಅಧೀಕ್ಷಕ ಚಿನ್ನಪಾಲಯ್ಯ, ಅನುಗ್ರಹ ಸಂಸ್ಥೆಯ ಸಿಸ್ಟರ್ ಪ್ರಜ್ಞಾ, ಸ್ಮೈಲ್ ಸಂಸ್ಥೆಯ ಮುಖ್ಯಸ್ಥ ಫಣಿ ರಾಜ್, ಆದರ್ಶ ವೃದ್ಧಾಶ್ರಮದ ವೆಂಕೋಬಪ್ಪ, ಜ್ಞಾನಮ್ಮ ವೃದ್ಧಾಶ್ರಮದ ಸಿಸ್ಟರ್ ಲಿಲ್ಲಿ, ದೈಹಿಕ ಶಿಕ್ಷಕ ವಿರುಪಾಕ್ಷಯ್ಯ, ನಿವೃತ್ತ ದೈಹಿಕ ಶಿಕ್ಷಕ ಅಬ್ದುಲ್ ಮುನಾಫ್, ಮಾರ್ಕಂಡಯ್ಯ, ವಿರುಪಾಕ್ಷಯ್ಯ ಹಿರೇಮಠ್ ಹಾಗೂ ಜಿಲ್ಲೆಯ ಪುನರ್ವಸತಿ ಕಾರ್ಯಕರ್ತರು ಮತ್ತು ಹಿರಿಯ ನಾಗರಿಕರು ಉಪಸ್ಥಿತರಿದ್ದರು.

ಅಮರಾವತಿಯಲ್ಲಿ ವಿದ್ಯುತ್ ಸ್ವೀಕರಣಾ ಕೇಂದ್ರದ ಶಂಕುಸ್ಥಾಪನೆ ಇಂದು

ಬಾಗಲಕೋಟೆ ,ಸೆ.27–
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಸೆಪ್ಟೆಂಬರ 26 ರಂದು ಬೆಳಿಗ್ಗೆ 10 ಗಂಟೆಗೆ ಹುನಗುಂದ ತಾಲೂಕಿನ ಅಮರಾವತಿಯಲ್ಲಿ 2★60 ಎಂವಿಎ, 220/110 ಕೆವಿ ವಿದ್ಯುತ್ ಕೇಂದ್ರದ ಶಂಕುಸ್ಥಾಪನೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿಜಯಾನಂದ ಕಾಶಪ್ಪನವರ ಕಾರ್ಯಕ್ರಮದ ಶಂಕುಸ್ಥಾಪನೆ ಹಾಗೂ ಅಧ್ಯಕ್ಷತೆಯನ್ನು ವಹಿಸುವರು. ಮುಖ್ಯ ಅತಿಥಿಗಳಾಗಿ ಉಪಸಭಾಪತಿ ಡಾ.ಉಮಾಶ್ರೀ, ನವದೆಹಲಿ ಕರ್ನಾಟಕ ವಿಶೇಷ ಪ್ರತಿನಿಧಿ-2 ಪ್ರಕಾಶ ಹುಕ್ಕೇರಿ, ಬೀಳಗಿ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿದಂತೆ ಜಿಲ್ಲೆಯ ಎಲ್ಲ ಶಾಸಕರು, ವಿಧಾನ ಪರಿಷತ್ ಶಾಸಕರು ಹಾಗೂ ಇತರೆ ಗಣ್ಯಮಾನ್ಯರು ಆಗಮಿಸಲಿದ್ದಾರೆ.

ಮುಳುಗಡೆ ಸಂತ್ರಸ್ತರಿಗೆ 153 ಇ-ಖಾತಾ ಉತಾರೆ ವಿತರಣೆ



ಬಾಗಲಕೋಟೆ,ಸೆ.27–
ಮುಳುಗಡೆ ಸಂತ್ರಸ್ತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ದಾಖಲೆಗಳನ್ನು ಒದಗಿಸಲಾಗುತ್ತಿದೆ ಎಂದು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಹೇಳಿದರು.

ಬಿಟಿಡಿಎ ಆವರಣದಲ್ಲಿಂದು ಯುನಿಟ್-1 ಮತ್ತು ಯುನಿಟ್-2ರ ಮುಳುಗಡೆ ಸಂತ್ರಸ್ಥರಿಗೆ ಇ-ಖಾತಾಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು ಸದ್ಯ 153 ಇ-ಖಾತಾಗಳ ಉತಾರೆಗಳನ್ನು ವಿತರಣೆ ಮಾಡಲಾಗಿದ್ದು, ಮುಂದಿನ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಉತಾರೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಇ-ಖಾತಾ ಉತಾರೆಗಳು ದೊರೆತ ಹಿನ್ನೆಲೆಯಲ್ಲಿ ಸಂತ್ರಸ್ತರು ಸಂತಸ ವ್ಯಕ್ತಪಡಿಸಿ, ಪ್ರಾಧಿಕಾರದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅಜಯಕುಮಾರ ಸರನಾಯಕ, ಪ್ರಾಧಿಕಾರದ ಮುಖ್ಯ ಇಂಜಿನಿಯರ್ ಚಂದ್ರಹಾಸ ಬಂಡಿ, ಅಧೀಕ್ಷಕ ಅಭಿಯಂತರ ಎಸ್.ಎಸ್.ಕರಗಾರ, ಕಾರ್ಯನಿರ್ವಾಹಕ ಅಭಿಯಂತರರು, ವಿಭಾಗ-2, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಪ್ರಭಾರ ಪುನರ್ವಸತಿ ಅಧಿಕಾರಿ ವೈ.ಬಿ.ಪಾತ್ರೋಟಿ, ಅಧ್ಯಕ್ಷರ ಆಪ್ತ ಸಹಾಯಕರು ಪ್ರಾಧಿಕಾರದ ಸಿಬ್ಬಂದಿ ಉಪಸ್ಥಿತರಿದ್ದರು.

ಬಳ್ಳಾರಿ : ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಬೂದಿದಿಬ್ಬ ಆವರಣದಲ್ಲಿ 'ಸ್ವಚ್ಛತಾ ಹಿ ಸೇವಾ' ಅಭಿಯಾನ



ಬಳ್ಳಾರಿ,ಸೆ.25–
ವಿಶ್ವ ಪ್ರವಾಸೋದ್ಯಮ ದಿನಾಚರಣೆ – 2026ರ ಅಂಗವಾಗಿ 'ಸ್ವಚ್ಛತಾ ಪಕ್ವಾಡ' ಹಾಗೂ 'ಸ್ವಚ್ಛತಾ ಹಿ ಸೇವಾ' ಕಾರ್ಯಕ್ರಮವನ್ನು ಕುಡುತಿನಿ ತೋರಣಗಲ್ಲು ರಾಷ್ಟ್ರೀಯ ಹೆದ್ದಾರಿ 67ರ ಮಧ್ಯದಲ್ಲಿರುವ ಐತಿಹಾಸಿಕ ಬೂದಿದಿಬ್ಬ ಬಳಿ ಶುಕ್ರವಾರ ಆಯೋಜಿಸಲಾಗಿತ್ತು.

ಪ್ರವಾಸೋದ್ಯಮ ಇಲಾಖೆ, ತೋರಣಗಲ್ಲು ಗ್ರಾಮ ಪಂಚಾಯಿತಿ ಹಾಗೂ ಸಾಹಸ್ ಸ್ವಯಂ ಸೇವಾ ಸಂಸ್ಥೆಯ ಸಹಯೋಗದಲ್ಲಿ ಈ ಸ್ವಚ್ಛತಾ ಅಭಿಯಾನ ನಡೆಯಿತು.

ಪ್ರವಾಸಿ ತಾಣಗಳ ಸ್ವಚ್ಛತೆ ಹಾಗೂ ಐತಿಹಾಸಿಕ ತಾಣಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕೈಗೊಂಡ ಈ ಕಾರ್ಯಕ್ರಮದಲ್ಲಿ ಬೂದಿದಿಬ್ಬದ ಸುತ್ತಮುತ್ತಲಿನ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ನಿಮ್ಮೂರು ಸುದ್ದಿ

ಸಂಪಾದಕೀಯ



ಚು. ಆಯೋಗ ಕೊಟ್ಟಿದ್ದು ಸಭೆಯ ನಡಾವಳಿ ಪತ್ರವಲ್ಲ- ತಪ್ಪೊಪ್ಪಿಗೆ ಪತ್ರ!

ಅವೈಜ್ಞಾನಿಕ '' ಪ್ರಕ್ರಿಯೆ ಮತ್ತು ಆಯೋಗದೊಳಗಿನ ಭಿನ್ನಾಭಿಪ್ರಾಯಗಳು ಸಾರ್ವಜನಿಕವಾಗಿ ಬಯಲಾದ ಬೆನ್ನಲ್ಲೇ ಬಿಡುಗಡೆಯಾದ ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆ, ತಪ್ಪುಗಳನ್ನು ತಿದ್ದುವ ಬದಲು ವ್ಯವಸ್ಥೆಯ ಲೋಪಗಳಿಗೆ ತೇಪೆ ಹಚ್ಚುವ ಯತ್ನದಂತೆ ಕಾಣುತ್ತಿದೆ.

ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಜನರು ಚುನಾವಣಾ ಆಯುಕ್ತರೊಬ್ಬರ ರಾಜೀನಾಮೆಗೆ ಒತ್ತಾಯಿಸುತ್ತಿರುವ ಕೂಗು ಕೇಳಿಬರುತ್ತಿದೆ. ದೇಶವ್ಯಾಪಿ ಪ್ರತಿಭಟನೆಗಳು ನಡೆಯುತ್ತಿವೆ. ಅವೈಜ್ಞಾನಿಕ ವಿರೋಧಿಸಿ ದೇಶದಲ್ಲಿ ಕೂಗು ಇದ್ದೇಯಿದೆ. ದಿ ಇಂಡಿಯನ್ ಎಕ್ಸ್ ಪ್ರೆಸ್‌ನ ರಿತಿಕಾ ಚೋಪ್ರ ಅವರು ಮಾಡಿದ ತನಿಖಾ ವರದಿಯಿಂದ ಹೊರ ಬಂದ ವಿಚಾರವೆಂದರೆ, ಪ್ರಧಾನಿ ಮೋದಿ ಅವರ ನೇತೃತ್ವದ ಸಮಿತಿಯೇ ಆಯ್ಕೆ ಮಾಡಿದ ಚುನಾವಣಾ ಆಯುಕ್ತ ಡಾ. ಸುಖ್‌ಬಿರ್ ಸಿಂಗ್ ಸಂಧು ಮತ್ತು ವಿವೇಕ್ ಜೋಷಿ ಅವರು ಪ್ರಕ್ರಿಯೆಯ ನಿರ್ಣಯ ಮತ್ತು ನಿರ್ಧಾರಗಳು ಏಕಪಕ್ಷೀಯವಾಗಿದೆ, ಕಾನೂನು ಬಾಹಿರವಾಗಿದೆ, ಕೇಂದ್ರಿಕೃತವಾಗುತ್ತಿದೆ ಹಾಗೂ ಅನಧೀಕೃತವಾಗಿದೆ ಎಂದು ಗಂಭೀರ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ಕಳೆದ 10 ತಿಂಗಳಲ್ಲಿ ಒಟ್ಟು 14 ಪತ್ರಗಳನ್ನು ಬರೆದಿದ್ದಾರೆ ಎಂಬುದು ಬೆಳಕಿಗೆ ಬಂದಿದೆ. ಈ ಹಿನ್ನಲೆಯಲ್ಲಿ ಪ್ರತಿಭಟನೆಗಳು ಮತ್ತುಷ್ಟು ಜೋರಾಗಿವೆ.

ದೇಶಾದ್ಯಂತ ಪ್ರತಿಭಟನೆಗಳು ಭುಗಿಲೆದ್ದ ಬೆನ್ನಲ್ಲೇ, ಸೆಪ್ಟೆಂಬರ್ 26ರಂದು ಚುನಾವಣಾ ಆಯೋಗ ನಡೆಸಿದ ಸಭೆ ಮತ್ತು ನಂತರ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆ ಈಗಾಗಲೇ ನಡೆಯುತ್ತಿರುವ ಚರ್ಚೆಗೆ ಹೊಸ ಆಯಾಮ ನೀಡಿದೆ. ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಮತ್ತು ಚುನಾವಣಾ ಆಯುಕ್ತರಾದ ಡಾ. ಸುಖ್‌ಬೀರ್ ಸಿಂಗ್ ಸಂಧು ಮತ್ತು ಡಾ. ವಿವೇಕ್ ಜೋಷಿ ಅವರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ಹಲವು ನಿರ್ಣಯಗಳನ್ನು ಸರ್ವಾನುಮತದಿಂದ ತೆಗೆದುಕೊಳ್ಳಲಾಗಿದೆ ಎಂದು ಆಯೋಗ ತಿಳಿಸಿದೆ.

ಆದರೆ, ಇದು ಕೇವಲ ಸಾಮಾನ್ಯ ಆಡಳಿತಾತ್ಮಕ ಸಭೆಯಲ್ಲ. ಕಳೆದ ಕೆಲವು ತಿಂಗಳುಗಳಲ್ಲಿ ಪ್ರಕ್ರಿಯೆ, - ವ್ಯವಸ್ಥೆ, ಅಧಿಕಾರಗಳ ಕೇಂದ್ರೀಕರಣ, -6 ಸೇರಿದಂತೆ ಹಲವು ವಿಷಯಗಳ ಕುರಿತು ಚುನಾವಣಾ ಆಯುಕ್ತರ ನಡುವಿನ ಭಿನ್ನಾಭಿಪ್ರಾಯಗಳು ಸಾರ್ವಜನಿಕ ಚರ್ಚೆಗೆ ಬಂದಿರುವ ಸಂದರ್ಭದಲ್ಲಿ ನಡೆದ ಈ ಸಭೆ, ಈಗಾಗಲೇ ಉಂಟಾಗಿರುವ ಸಮಸ್ಯೆಗಳಿಗೆ ಪರಿಹಾರ ನೀಡುವ ಬದಲು ಅವುಗಳಿಗೆ ತೇಪೆ ಹಚ್ಚುವ ಪ್ರಯತ್ನದಂತೆ ಕಾಣುತ್ತದೆ.

ಮೊದಲನೆಯದಾಗಿ, ಸಂದರ್ಭದಲ್ಲಿ ಅನ್‌ಮ್ಯಾಪ್ಡ್ ಮತ್ತು ಲಾಜಿಕಲ್ ಡಿಸ್ಕ್ರೆಪೆನ್ಸಿ ಎಂದು ನೋಟಿಸ್ ಪಡೆದ ಮತದಾರರ ವಿಚಾರಣೆಯ ವಿಧಾನದಲ್ಲಿ ಬದಲಾವಣೆ ಮಾಡಲಾಗಿದೆ. ಇನ್ನು ಮುಂದೆ ಗಳು ಅಂತಹ ಮತದಾರರ ಮನೆಗಳಿಗೆ ತೆರಳಿ ದಾಖಲೆಗಳನ್ನು ಸಂಗ್ರಹಿಸಿ -ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಆಯೋಗ ಹೇಳಿದೆ. ಪ್ರತಿಯೊಬ್ಬ ಮತದಾರರೂ / ಕಚೇರಿಗೆ ತೆರಳಿ ವೈಯಕ್ತಿಕ ವಿಚಾರಣೆ ಎದುರಿಸಬೇಕಾಗಿಲ್ಲ. ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಚಾರಣೆ ನಡೆಯಲಿದ್ದು, ಅಗತ್ಯವಿದ್ದರೆ ಮತದಾರರ ಪರವಾಗಿ ಕುಟುಂಬದ ಯಾವುದೇ ವಯಸ್ಕ ಸದಸ್ಯರು ಭಾಗವಹಿಸಬಹುದು. ಆನ್‌ಲೈನ್ ವಿಚಾರಣೆಯ ವ್ಯವಸ್ಥೆಯನ್ನೂ ಬಲಪಡಿಸಲಾಗುವುದು ಎಂದು ಹೇಳಲಾಗಿದೆ.

ಗಂಭಿರವಾದ ಪ್ರಶ್ನೆ ಏಳುವುದೇ ಇಲ್ಲಿ: -6 ಕುರಿತ ಆಯೋಗದ ಸ್ಪಷ್ಟೀಕರಣವೂ ಮಹತ್ವದ್ದಾಗಿದೆ. ಅವಧಿಯಲ್ಲಿ -6ಗೆ ಜೋಡಿಸಲಾದ ಹೆಚ್ಚುವರಿ ಘೋಷಣೆಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ ಎಂದು ಆಯೋಗ ಹೇಳಿದೆ. ಆದರೆ, ಮುಗಿದ ನಂತರ ಸಾಮಾನ್ಯ ಅವಧಿಯಲ್ಲಿ -1960ರ ಪ್ರಕಾರ ಅನ್ವಯಿಸುವ ಸಾಮಾನ್ಯ ನಮೂನೆಗಳನ್ನೇ ಬಳಸಲಾಗುವುದು ಎಂದು ಸ್ಪಷ್ಟಪಡಿಸಿದೆ.

ಇದರಿಂದ, ಒಂದು ಮೂಲಭೂತ ಪ್ರಶ್ನೆ ಉದ್ಭವಿಸುತ್ತದೆ: ಸಂದರ್ಭದಲ್ಲಿ ಮಾತ್ರ ಹೆಚ್ಚುವರಿ ಅವಶ್ಯಕತೆಗಳು ಅನ್ವಯಿಸುವುದಾದರೆ, ಈ ವಿಶೇಷ ವ್ಯವಸ್ಥೆಯ ಅಗತ್ಯ ಮತ್ತು ಅವಧಿಯ ಕುರಿತು ಆಯೋಗವು ತಗೆದುಕೊಂಡ ತೀರ್ಮಾನ ತಪ್ಪಾಗಿತ್ತು ಎಂದು ಅಲ್ಲವೆ? ಅಕ್ಟೋಬರ್ ನಂತರ ಎಲ್ಲರು ಎಂದಿನಂತೆ ಫಾರಂ-6 ಹಾಕಿಕೊಂಡು ಮತದಾರರ ಪಟ್ಟಿಗೆ ವಾಪಾಸು ಬರಬಹುದು ಎಂದಾದರೆ, ಎಂಬ ಪರಿಷ್ಕರಣೆಯ ಅಗತ್ಯ ಏನಿತ್ತು? ಅದಕ್ಕಾಗಿ ಸಮಯ ಮತ್ತು ಹಣ ಖರ್ಚು ಯಾಕೆ ಮಾಡಬೇಕಿತ್ತು, ಜನರನ್ನು ಪರದಾಡಿಸಿದ್ದು ಯಾಕೆ? -6 ಬದಲಾವಣೆ ಕುರಿತು ಆಯುಕ್ತರ ನಡುವೆಯೇ ಭಿನ್ನಾಭಿಪ್ರಾಯಗಳು ವರದಿಯಾಗಿರುವ ಹಿನ್ನೆಲೆಯಲ್ಲಿ ಈ ಸ್ಪಷ್ಟೀಕರಣವು ಇನ್ನಷ್ಟು ಮಹತ್ವ ಪಡೆಯುತ್ತದೆ.

ಎರಡನೆಯದಾಗಿ, ಮತದಾರರ ತಪ್ಪಿಲ್ಲದಿದ್ದರೂ, ಸಾಫ್ಟ್‌ವೇರ್ ಅಥವಾ ಮ್ಯಾಪಿಂಗ್ ಪ್ರಕ್ರಿಯೆಯಿಂದ ಉಂಟಾದ ವ್ಯತ್ಯಾಸಗಳಿದ್ದರೆ, ಅದರ ಭಾರವನ್ನು ಸಾಮಾನ್ಯ ಮತದಾರರ ಮೇಲೆಯೇ ಏಕೆ ಹಾಕಬೇಕು? ಸೆ.26ರ ನಿರ್ಣಯವು ಈ ಹಿಂದೆ ಅನುಸರಿಸಲಾಗುತ್ತಿದ್ದ ವಿಧಾನವನ್ನು ತಪ್ಪಾಗಿತ್ತು ಎಂದು ಒಪ್ಪಿಕೊಂಡತೆಯೇ ಆಗುತ್ತದೆ. ಅಲ್ಲದೆ ಈಗಾಗಲೇ ನಡೆದ ರಾಜ್ಯಗಳ ಮತದಾರರಿಗೆ ನೇರಾನೇರ ತಾರತಮ್ಯ ಮಾಡಿದಂತೆ!

ಮೂರನೆಯದಾಗಿ, ದಾಖಲೆಗಳನ್ನು ನೀಡಲು ಮತದಾರರು ಕಚೇರಿಗಳಿಗೆ ಅಲೆದಾಡಬೇಕಾಗಿಲ್ಲ; ಗಳೇ ಮನೆಗೆ ತೆರಳಿ ದಾಖಲೆಗಳನ್ನು ಪಡೆಯಬೇಕು ಎಂಬ ನಿರ್ಧಾರವೂ ಗಮನಾರ್ಹ. ಇದು ವಿಶೇಷವಾಗಿ ಬಡವರು, ಕಾರ್ಮಿಕರು, ವಲಸೆ ಕಾರ್ಮಿಕರು ಹಾಗೂ ನಿರಾಶ್ರಿತರಿಗೆ ಮುಖ್ಯವಾಗಿದೆ. ಆದರೆ, ಇದೇ ಸೌಲಭ್ಯ ಹಿಂದಿನ ಹಂತಗಳಲ್ಲಿ ನಡೆದ ರಾಜ್ಯಗಳಲ್ಲೂ ಸಮಾನವಾಗಿ ದೊರಕಿತ್ತೇ ಎಂಬ ಪ್ರಶ್ನೆ ಉಳಿಯುತ್ತದೆ. ಒಂದು ಚುನಾವಣಾ ಪ್ರಕ್ರಿಯೆಯಲ್ಲಿ ರಾಜ್ಯದಿಂದ ರಾಜ್ಯಕ್ಕೆ ಮತದಾರರ ಮೇಲಿನ ಹೊರೆ ಬದಲಾಗಬಾರದು ಎಂಬುದು ತಾಂತ್ರಿಕ ಸಮಾನತೆಯ ಮೂಲ ಪ್ರಶ್ನೆಯಾಗಿದೆ.

ನಾಲ್ಕನೆಯದಾಗಿ, - ವ್ಯವಸ್ಥೆಯ ಪರಿಶೀಲನೆಗೆ ಹಿರಿಯ ಉಪ ಚುನಾವಣಾ ಆಯುಕ್ತರ ನೇತೃತ್ವದಲ್ಲಿ ಹಾಗೂ / ಯ ಸ್ವತಂತ್ರ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸುವುದಾಗಿ ಆಯೋಗ ಹೇಳಿದೆ. ಕ್ಷೇತ್ರಾಧಿಕಾರಿಗಳಿಗೆ ಅವರ ಕಾನೂನುಬದ್ಧ ಅಧಿಕಾರಗಳಿಗೆ ಅನುಗುಣವಾಗಿ ಮಾತ್ರ - ಪ್ರವೇಶವಿರುತ್ತದೆ ಎಂದೂ ಹೇಳಲಾಗಿದೆ. ಮುಂದಿನ ದಿನಗಳಲ್ಲಿ ಹೊಸ ಮಾಡ್ಯೂಲ್‌ಗಳನ್ನು ಆಯೋಗದ ಅನುಮೋದನೆಗೂ ಮುನ್ನ ನಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಲಾಗಿದೆ.

ನನ್ನ ದೃಷ್ಟಿಯಲ್ಲಿ, ಈ ಕ್ರಮಗಳು - ಮತ್ತು ಅನುಷ್ಠಾನದ ಕುರಿತು ಉದ್ಭವಿಸಿರುವ ಗಂಭೀರ ಪ್ರಶ್ನೆಗಳನ್ನು ಸ್ವತಃ ಆಯೋಗವೂ ಪರಿಗಣಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬುದನ್ನು ತೋರಿಸುತ್ತವೆ.

ಆದರೆ, ಪ್ರಶ್ನೆಗಳು ಇಲ್ಲಿಗೆ ಮುಗಿಯುವುದಿಲ್ಲ. ಪ್ರಕ್ರಿಯೆಯಲ್ಲಿ ಸಂಭವಿಸಿದ ತಪ್ಪುಗಳು, ಮತದಾರರಿಗೆ ನೀಡಲಾದ ನೋಟಿಸ್‌ಗಳು, ಮ್ಯಾಪಿಂಗ್ ಸಮಸ್ಯೆಗಳು ಹಾಗೂ ಮತದಾರರ ಮೇಲಾದ ಆಡಳಿತಾತ್ಮಕ ಹೊರೆಗಳ ಕುರಿತು ಸಂಪೂರ್ಣ ಪರಿಶೀಲನೆ ಅಗತ್ಯವಿದೆ. ತಪ್ಪುಗಳು ನಡೆದಿರುವುದು ನಿಚ್ಚಳ. ಆದರೆ, ಅವುಗಳಿಗೆ ಹೊಣೆಗಾರಿಕೆ ನಿಗದಿಯಾಗಬೇಕು. ಅರ್ಹ ಮತದಾರರು ಯಾರೂ ಪಟ್ಟಿಯಿಂದ ಹೊರಗುಳಿಯದಂತೆ ಖಚಿತಪಡಿಸಿಕೊಳ್ಳಬೇಕು ಎಂದಾದರೆ, ಅವೈಜ್ಞಾನಿಕ, ಅಸಂವಿಧಾನಿಕ ಹಾಗೂ ದೋಷಪೂರಿತ ಎಂದು ಸಾಬೀತಾಗಿರುವ ಪ್ರಕ್ರಿಯೆ ರದ್ದಾಗಬೇಕು, ಜನಸ್ನೇಹಿಯಾದ ವೈಜ್ಞಾನಿಕ ಪರಿಷ್ಕರಣೆ ನಡೆಯಬೇಕು.

ಜನರ, ನಾಗರಿಕ ಸಂಘಟನೆಗಳ ಬೇಡಿಕೆ ಸ್ಪಷ್ಟವಾಗಿದೆ: ಏಕಪಕ್ಷೀಯ ಮತ್ತು ಕಾನೂನು ಬಾಹಿರ ನಡೆಯನ್ನು ಅನುಸರಿಸುತ್ತಿರುವ ಗ್ಯಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಮತ್ತು ದೇಶದ ಜನರಲ್ಲಿ ಕ್ಷಮೆ ಕೇಳಬೇಕು. ಆಯುಕ್ತರ ಮೇಲೆ ಸಿವಿಲ್ ಅಥವಾ ಕ್ರಿಮಿನಲ್ ಪ್ರೊಸಿಡಿಂಗ್ಸ್ ನಡೆಯಬಾರದೆನ್ನುವ 2023ರ ಚುನಾವಣಾ ಆಯುಕ್ತರ ಕಾಯಿದೆಯ ತಿದ್ದುಪಡಿಯನ್ನು ರದ್ದು ಮಾಡಿ ಆಯುಕ್ತರ ಮೇಲೆ ಸುಪ್ರಿಂ ಕೋರ್ಟ್ ಸುಮೊಟೊ ಪ್ರಕರಣ ದಾಖಲಿಸಿ, ಬಂಧಿಸಬೇಕು, ಇದರಲ್ಲಿ ಭಾಗಿಯಾದ ಎಲ್ಲರ ಮೇಲೆ ಗಂಭೀರ ತನಿಖೆಯಾಗಬೇಕು, ಪ್ರಕ್ರಿಯೆಯ ಕಾನೂನುಬದ್ಧತೆ ಮತ್ತು ಅದರ ಪರಿಣಾಮಗಳ ಕುರಿತು ಪಾರದರ್ಶಕ ಪರಿಶೀಲನೆ ನಡೆಯಬೇಕು. ರದ್ದು ಮಾಡಿ ಪಟ್ಟಿಯಿಂದ ಹೊರಗಿಡಲಾದ ಕೋಟ್ಯಾಂತರ ಅರ್ಹ ಮತದಾರರನ್ನು ತಕ್ಷಣ ಸೇರಿಸಬೇಕು, ಮತದಾರರನ್ನು ಹೊರಗಿಟ್ಟು ನಡೆಸಿದ ಚುನಚಾವಣೆಗಳನ್ನೂ ರದ್ದು ಮಾಡಿ ಮರು ಚುನಾವಣೆಗಳನ್ನು ನಡೆಸಬೇಕು. ಚುನಾವಣಾ ಆಯೋಗದ ಮೇಲಿನ ಜನರ ವಿಶ್ವಾಸವನ್ನು ಪುನಃಸ್ಥಾಪಿಸುವುದು ಯಾವುದೇ ತಾತ್ಕಾಲಿಕ ತೇಪೆಗಿಂತ ಮುಖ್ಯ.

ಪ್ರಜಾಪ್ರಭುತ್ವದಲ್ಲಿ ಮತದಾರರು ಆಡಳಿತ ವ್ಯವಸ್ಥೆಯ ಅನುಕೂಲಕ್ಕಾಗಿ ಇರುವವರು ಅಲ್ಲ. ಆಡಳಿತ ವ್ಯವಸ್ಥೆಯೇ ಮತದಾರರ ಹಕ್ಕುಗಳನ್ನು ರಕ್ಷಿಸಲು ಇರುವ ವ್ಯವಸ್ಥೆಯಾಗಿದೆ.

ಕಲಬುರಗಿ ನಮ್ಮನ್ನ ಎಲ್ಲಿಗೆ ಕಳುಹಿಸುತ್ತೀರಿ?: ತಗ್ಗಿನ ಬೇಲಿಯ ನಡುವೆ ಕಣ್ಣೀರಿಡುತ್ತಿರುವ ಸ್ಲಂ ನಿವಾಸಿಗಳು

92ಕ್ಕೂ ಅಧಿಕ ಸ್ಲಂ ಕುಟುಂಬಗಳ ಬದುಕು ಕೇವಲ ಜಮೀನಿನ ಹಕ್ಕಿನ ಪ್ರಶ್ನೆಯಲ್ಲ; ಅವರ ಸುರಕ್ಷಿತ ಓಡಾಟ, ಕುಡಿಯುವ ನೀರು ಹಾಗೂ ನಿತ್ಯದ ಬದುಕಿನ ಹಕ್ಕಿನ ಪ್ರಶ್ನೆಯೂ ಹೌದು. ನ್ಯಾಯಾಲಯದ ವಿಚಾರಣೆ ಅಂತಿಮಗೊಳ್ಳುವವರೆಗೆ ಯಾವುದೇ ಕ್ರಮದಿಂದ ನಿವಾಸಿಗಳ ಮೂಲಭೂತ ಜೀವನಕ್ಕೆ ತೊಂದರೆಯಾಗದಂತೆ ಆಡಳಿತಾತ್ಮಕ ವ್ಯವಸ್ಥೆ ಕಲ್ಪಿಸುವುದು ಈಗ ಪ್ರಮುಖ ಸವಾಲಾಗಿದೆ.



ಒಂದು ಕಡೆ ನ್ಯಾಯಾಲಯದ ಮೆಟ್ಟಿಲೇರಿರುವ ವಾಸಸ್ಥಳದ ಹಕ್ಕಿನ ಹೋರಾಟ; ಮತ್ತೊಂದೆಡೆ ಬದುಕಿನ ಮೂಲಭೂತ ಅವಶ್ಯಕತೆಗಳಾದ ರಸ್ತೆ, ಕುಡಿಯುವ ನೀರು ಮತ್ತು ದಿನಸಿ ಪಡೆಯುವ ದಾರಿಯೇ ಬಂದ್ ಆಗಿದ್ದು, ಕಲಬುರಗಿಯ ಹುಮನಾಬಾದ್ ರಿಂಗ್ ರಸ್ತೆಯ ಕೆ ಕೆ ನಗರ ಸಮೀಪದ ಸಿದ್ದೇಶ್ವರ ಕಾಲನಿ ಮತ್ತು ರಾಮನಗರ ಸ್ಲಂ ವಿಭಾಗ2ರ ಸರ್ವೇ ನಂ.137ರಲ್ಲಿ ವಾಸಿಸುತ್ತಿರುವ 92ಕ್ಕೂ ಅಧಿಕ ಸ್ಲಂ ನಿವಾಸಿಗಳ ಬದುಕು ಇದೀಗ ಆತಂಕದ ನಡುವೆ ಸಿಲುಕಿದೆ.

''ಗುಡಿಸಲು ತೆರವುಗೊಳಿಸದಂತೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಇದ್ದರೂ, ಜಮೀನಿನ ಸುತ್ತ ಜೆಸಿಬಿ ಮೂಲಕ ತಗ್ಗು ತೋಡಿ ತಂತಿ ಬೇಲಿ ಅಳವಡಿಸುವ ಕಾಮಗಾರಿ ಕೈಗೊಳ್ಳಲಾಗಿದೆ. ಇದರಿಂದ ತಮ್ಮ ಓಡಾಟದ ದಾರಿ ಹಾಗೂ ನೀರು ತರಲು ಬಳಸುತ್ತಿದ್ದ ಮಾರ್ಗ ಬಂದ್ ಆಗಿದೆ'' ಎಂಬುದು ನಿವಾಸಿಗಳ ಆರೋಪವಾಗಿದೆ.

ಬದುಕಿನ ದಾರಿಗೆ ಅಡ್ಡಿಯಾದ ತಗ್ಗು

''ಸ್ಲಂ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳಿಗೆ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ದಾರಿ ಅತ್ಯಂತ ಅಗತ್ಯ. ಆದರೆ ಜಮೀನಿನ ಸುತ್ತ ತಗ್ಗು ತೋಡಿರುವುದರಿಂದ ಓಡಾಡಲು ತೊಂದರೆಯಾಗಿದ್ದು, ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಅಪಾಯ ಎದುರಿಸುವಂತಾಗಿದೆ'' ಎಂದು ನಿವಾಸಿಗಳು ದೂರಿದ್ದಾರೆ.

''ರಸ್ತೆ ಇಲ್ಲದೆ ಹೊರಗೆ ಹೋಗುವುದೇ ಸವಾಲಾಗಿದೆ. ಕುಡಿಯುವ ನೀರು, ದಿನಸಿ ಹಾಗೂ ರೇಷನ್ ತರುವುದಕ್ಕೂ ತೊಂದರೆಯಾಗುತ್ತಿದೆ'' ಎಂಬುದು ನಿವಾಸಿಗಳ ಅಳಲು.

''ತಗ್ಗು ತೋಡಿರುವ ಸ್ಥಳದಲ್ಲಿ ವ್ಯಕ್ತಿಯೊಬ್ಬರು ಬಿದ್ದು ಗಾಯಗೊಂಡಿದ್ದಾರೆಂಬ ಆರೋಪವೂ ಕೇಳಿಬಂದಿದೆ. ಹೀಗಾಗಿ ಭದ್ರತೆ ಹೆಸರಿನಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿ ತಮ್ಮ ಪಾಲಿಗೆ ಮತ್ತಷ್ಟು ಅಪಾಯ ತಂದಿದೆ'' ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ನ್ಯಾಯಾಲಯದ ಆದೇಶವಿದ್ದರೂ ಏಕೆ ಈ ಕಾರ್ಯಾಚರಣೆ?

ಸ್ಲಂ ಜನಾಂದೋಲನ ಕರ್ನಾಟಕದ ಸಂಚಾಲಕಿ ರೇಣುಕಾ ಸರಡಗಿ ಮಾತನಾಡಿ, ''ಸರ್ವೇ ನಂ.137ರಲ್ಲಿ ವಾಸಿಸುತ್ತಿರುವ 92 ಕುಟುಂಬಗಳಿಗೆ ತೊಂದರೆ ನೀಡದಂತೆ ಹೈಕೋರ್ಟ್ ಜುಲೈ 29ರಂದು ತಡೆಯಾಜ್ಞೆ ನೀಡಿದೆ. ನ್ಯಾಯಾಲಯದ ತಡೆಯಾಜ್ಞೆ ಜಾರಿಯಲ್ಲಿರುವಾಗಲೇ ಗುಡಿಸಲುಗಳ ಸುತ್ತ ತಗ್ಗು ತೋಡಿ ಫೆನ್ಸಿಂಗ್ ಮಾಡಲಾಗುತ್ತಿದೆ. ಯಾವುದೇ ಮುನ್ನೋಟಿಸ್ ನೀಡದೆ ದಿಢೀರ್ ಕಾರ್ಯಾಚರಣೆ ನಡೆಸಲಾಗಿದೆ. ನಿವಾಸಿಗಳ ಓಡಾಟದ ದಾರಿ ಹಾಗೂ ನೀರು ತರಲು ಬಳಸುವ ಮಾರ್ಗವನ್ನು ಬಂದ್ ಮಾಡಲಾಗಿದೆ'' ಎಂದು ಆರೋಪಿಸಿದ್ದಾರೆ.

''ನಿವಾಸಿಗಳನ್ನು ಅವಾಚ್ಯವಾಗಿ ನಿಂದಿಸಿ ಬೆದರಿಕೆ ಹಾಕಲಾಗಿದೆ ಎಂಬ ಆರೋಪಗಳ ಬಗ್ಗೆಯೂ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು'' ಎಂದು ಒತ್ತಾಯಿಸಿದ್ದಾರೆ.

ನಾವು ಬಡವರು, ಎಲ್ಲಿ ಹೋಗಬೇಕು?

ಸ್ಲಂ ನಿವಾಸಿ ಲಕ್ಷ್ಮೀ ಅವರು ''ನಾವು ಬಡವರು, ಎಲ್ಲಿಗೆ ಹೋಗಬೇಕು?'' ಎಂದು ಅಸಹಾಯಕತೆಯಿಂದ ಪ್ರಶ್ನಿಸಿ, ''ನಮ್ಮ ಓಡಾಟಕ್ಕೆ ಜಾಗ ಬಿಡದೆ ಸುತ್ತಲೂ ಬೇಲಿ ಹಾಕಲಾಗುತ್ತಿದೆ. ಇದರಿಂದ ರಸ್ತೆ, ನೀರು, ದಿನಸಿ ಮತ್ತು ರೇಷನ್ ಪಡೆಯಲು ತೊಂದರೆಯಾಗುತ್ತಿದೆ. ನಮ್ಮ ಬದುಕಿನ ದಾರಿಯನ್ನೇ ಬಂದ್ ಮಾಡಿದಂತಾಗಿದೆ'' ಎಂದು ಅಳಲು ತೋಡಿಕೊಂಡರು.

ವೃದ್ಧೆ ಲಕ್ಷ್ಮೀಬಾಯಿ ಅವರು ಮತ್ತಷ್ಟು ನೋವಿನಿಂದ, ''ಗುಡಿಸಲುಗಳ ಸುತ್ತ ತೋಡಿರುವ ತಗ್ಗಿನಿಂದ ರಾತ್ರಿಯಲ್ಲಿ ವ್ಯಕ್ತಿಯೊಬ್ಬರು ಬಿದ್ದು ಕಾಲಿಗೆ ಗಾಯ ಮಾಡಿಕೊಂಡಿದ್ದಾರೆ. ನಮಗೆ ಹೀಗೆ ತೊಂದರೆ ಕೊಡುವ ಬದಲು ಈ ತಗ್ಗನ್ನೇ ಮುಚ್ಚಿ. ಸಮಸ್ಯೆ ಬಗೆಹರಿಯುವವರೆಗೆ ನಾವು ಈ ಜಾಗ ಬಿಟ್ಟು ಹೋಗುವುದಿಲ್ಲ'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲಾಖೆಯ ಸ್ಪಷ್ಟನೆ ಏನು?

ನಿವಾಸಿಗಳ ಆರೋಪಕ್ಕೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಲಬುರಗಿ ಜಿಲ್ಲಾ ವ್ಯವಸ್ಥಾಪಕಿ ಸಿದ್ದಮ್ಮ ಆರ್ ಎನ್ ಅವರು ಪ್ರತಿಕ್ರಿಯೆ ನೀಡಿದ್ದು, ''ಜಮೀನಿನಲ್ಲಿ ಟ್ರಕ್ ಹಾಗೂ ಲಾರಿಗಳ ಸಂಚಾರ ಹೆಚ್ಚಾಗಿದೆ. ಸಾರ್ವಜನಿಕರ ಓಡಾಟವೂ ಹೆಚ್ಚಾಗಿದೆ. ಜಮೀನಿನಲ್ಲಿರುವ ಗುಡಿಸಲುಗಳಿಗೆ ಯಾವುದೇ ತೊಂದರೆ ನೀಡಬಾರದೆಂದು ನ್ಯಾಯಾಲಯದ ತಡೆಯ ಾಜ್ಞೆ ಇರುವುದರಿಂದ ಅವುಗಳನ್ನು ತೆರವುಗೊಳಿಸದೇ ಸುರಕ್ಷಿತವಾಗಿ ಕಾಯ್ದುಕೊಳ್ಳಲಾಗಿದೆ'' ಎಂದು ತಿಳಿಸಿದ್ದಾರೆ.

''ಹಿರಿಯ ಅಧಿಕಾರಿಗಳ ಆದೇಶದಂತೆ ಜಮೀನಿನ ಸುತ್ತ ತಂತಿಬೇಲಿ ಅಳವಡಿಸುವ ಭದ್ರತಾ ಕಾರ್ಯವನ್ನು ಜೆಸಿಬಿ ಮೂಲಕ ಕೈಗೊಳ್ಳಲಾಗುತ್ತಿದೆ. ಗುಡಿಸಲುಗಳನ್ನು ತೆರವುಗೊಳಿಸುವ ಯಾವುದೇ ಕಾರ್ಯಾಚರಣೆ ನಡೆಸುತ್ತಿಲ್ಲ'' ಎಂದು ತಿಳಿಸಿದ್ದಾರೆ.

ಆದೇಶ, ಅಧಿಕಾರ, ಬದುಕಿನ ನಡುವೆ ಸಿಲುಕಿದ ಬಡವರು

ಇಲ್ಲಿ ಎರಡು ವಿಭಿನ್ನ ಹೇಳಿಕೆಗಳು ಎದುರಾಗುತ್ತಿದ್ದು, ಒಂದು ಕಡೆ, ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಗುಡಿಸಲುಗಳನ್ನು ತೆರವುಗೊಳಿಸುತ್ತಿಲ್ಲ ಎಂದು ಇಲಾಖೆಯು ಸ್ಪಷ್ಟನೆ ನೀಡಿದೆ. ಮತ್ತೊಂದೆಡೆ, ತಡೆಯಾಜ್ಞೆಯ ನಡುವೆಯೇ ಕೈಗೊಂಡಿರುವ ಕಾಮಗಾರಿಯಿಂದ ತಮ್ಮ ಓಡಾಟ ಹಾಗೂ ನೀರಿನ ದಾರಿ ಬಂದ್ ಆಗಿದೆ ಎಂದು ನಿವಾಸಿಗಳು ಆರೋಪಿಸುತ್ತಿದ್ದಾರೆ.

ನ್ಯಾಯಾಲಯದ ಆದೇಶದ ವ್ಯಾಪ್ತಿ, ಫೆನ್ಸಿಂಗ್ ಕಾಮಗಾರಿಯ ಸ್ವರೂಪ ಹಾಗೂ ನಿವಾಸಿಗಳ ಮೂಲಭೂತ ಸೌಲಭ್ಯಗಳಿಗೆ ತೊಂದರೆಯಾಗಿದೆಯೇ ಎಂಬ ಪ್ರಶ್ನೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಸ್ಪಷ್ಟತೆ ಅಗತ್ಯವಾಗಿದೆ.

92ಕ್ಕೂ ಅಧಿಕ ಸ್ಲಂ ಕುಟುಂಬಗಳ ಬದುಕು ಕೇವಲ ಜಮೀನಿನ ಹಕ್ಕಿನ ಪ್ರಶ್ನೆಯಲ್ಲ; ಅವರ ಸುರಕ್ಷಿತ ಓಡಾಟ, ಕುಡಿಯುವ ನೀರು ಹಾಗೂ ನಿತ್ಯದ ಬದುಕಿನ ಹಕ್ಕಿನ ಪ್ರಶ್ನೆಯೂ ಹೌದು. ನ್ಯಾಯಾಲಯದ ವಿಚಾರಣೆ ಅಂತಿಮಗೊಳ್ಳುವವರೆಗೆ ಯಾವುದೇ ಕ್ರಮದಿಂದ ನಿವಾಸಿಗಳ ಮೂಲಭೂತ ಜೀವನಕ್ಕೆ ತೊಂದರೆಯಾಗದಂತೆ ಆಡಳಿತಾತ್ಮಕ ವ್ಯವಸ್ಥೆ ಕಲ್ಪಿಸುವುದು ಈಗ ಪ್ರಮುಖ ಸವಾಲಾಗಿದೆ.

ಹೊರಟ್ಟಿ ಅವರ ಹೋರಾಟದ ಬದುಕು ಮತ್ತು ಅವರ ಭಕ್ತ ಮಂಡಳಿಯ ಚಪ್ಪಾಳೆ

ಗ್ಯಾರಂಟಿ ಯೋಜನೆಗಳಿಂದ ಕೂಲಿ ಕಾರ್ಮಿಕರು ಸಿಗುತ್ತಿಲ್ಲವೆಂಬ ಬಸವರಾಜ ಹೊರಟ್ಟಿ ಅವರ ಹೇಳಿಕೆ ಮತ್ತು ಅದಕ್ಕೆ ಸಿಕ್ಕ ಸಾರ್ವಜನಿಕ ಚಪ್ಪಾಳೆಗಳು, ಕೇವಲ ಹಸಿವನ್ನೇ ಶ್ರಮದ ಇಂಧನವನ್ನಾಗಿ ನೋಡುವ ಸಮಾಜದ ಕ್ರೂರ ಮನಸ್ಥಿತಿಯನ್ನು ಅನಾವರಣಗೊಳಿಸುತ್ತವೆ.

ಬಸವರಾಜ ಹೊರಟ್ಟಿ ಅವರು ಒಂದು ರೀತಿಯಲ್ಲಿ ನನ್ನ ಫೇವರೇಟ್ ರಾಜಕಾರಣಿ. ಅದಕ್ಕೆ ಕಾರಣಗಳು ಹಲವು ಇರಬಹುದು. ಎಂಬತ್ತನೆ ವಯಸ್ಸಿಗೂ ಕೂಡ ಅವರು ಗಟ್ಟಿ ಮುಟ್ಟಿಯಾಗಿ ಇರುವುದು, ತಮ್ಮ ಹೊಲದಲ್ಲಿ ತಾವೇ ಟ್ರ್ಯಾಕ್ಟರ್ ಓಡಿಸುವುದು, ತನಗೆ ಅನ್ನಿಸಿದ್ದನ್ನು ಥಟ್ ಅಂತ ಹೇಳಿಬಿಡುವುದು, ಸುಮಾರು 46 ವರ್ಷ ಸತತ ಮೇಲ್ಮನೆ ಸದಸ್ಯ ರಾದ ಮೇಲೆ ಸದನ ಕಾನೂನುಗಳನ್ನು ಹೆಚ್ಚಿನ ಮಟ್ಟಿಗೆ ಬಾಯಿ ಪಾಠ ಮಾಡಿದಂತೆ ತಿಳಿದುಕೊಂಡು, ಇತರ ಸದಸ್ಯರು ತಪ್ಪು ಮಾಡಿದಾಗ: 'ಎ ತಮ್ಮಾ, ನೀನು ಹುಟ್ಟೋ ಕಿಂತಾ ಮದಲ್ ನಾನು ಇಲ್ಲೇ ಮೆಂಬರ್ ಆಗೇನು. ಸುಮ್ಮ ಕುಂದ್ರ' ಅಂತೆಲ್ಲ ಅಧಿಕಾರಯುತವಾಗಿ ಹೇಳುವುದು, ಇತ್ಯಾದಿ, ಇತ್ಯಾದಿ.

ಆದರೆ, ನನ್ನ ಗೆಳೆಯರು ಇವನ್ನೆಲ್ಲ ಒಪ್ಪುವುದಿಲ್ಲ. ''ಇದೆಲ್ಲ ಸುಳ್ಳು, 1980 ರಾಗ ಬೆಂಗಳೂರಿಗೆ ಹೋದ ಹೊರಟ್ಟಿ ಅವರು ಇನ್ನೂ ತನಕ ಧಾರವಾಡ ಭಾಷಾ ಮಾತಾಡ್ ತಾರ. ಬೆಂಗಳೂರು ಆಕ್ಸೆಂಟ್‌ಗೆ ಅವರು ಒಗ್ಗಿಸಿ ಕೊಂಡಿಲ್ಲ. ಅದಕ್ಕ ನಿನಗ ಸೇರತಾರ ಅವರು! ಅಂತ ಅವರು ನನ್ನನ್ನು ಚುಡಾಯಿಸುತ್ತಾರೆ. ಅದೂ ಇರಬಹುದು. ಇಲ್ಲ ಎನ್ನಲು ನಾ ಯಾರು?

ಶ್ರೀ 420 ಚಿತ್ರದಲ್ಲಿ ರಾಜಕಪೂರ ಅವರ ಪಾತ್ರ ರಾಜ್, ಮುಂಬೈಯ ಒಂದು ರದ್ದಿ ಅಂಗಡಿಗೆ ಬರುತ್ತದೆ. ಅಲ್ಲಿ ತನಗೆ ಬಂದ ಪ್ರಾಮಾಣಿಕತೆಯ ಚಿನ್ನದ ಪದಕ ಗಿರವಿ ಇಟ್ಟು 40 ರೂಪಾಯಿ ಪಡೆಯುತ್ತದೆ. ''ನೋಡುತ್ತಿರು, ಕಾಕಾ ಇಷ್ಟೇ ದುಡ್ಡಿನಿಂದ ಶುರು ಮಾಡಿ, ಇಡೀ ಮುಂಬೈ ಖರೀದಿ ಮಾಡುತ್ತೇನೆ, ಎಂದು ರಾಜ್ ಹೇಳುತ್ತಾನೆ. ಆಗ ರದ್ದಿ ಅಂಗಡಿಯ ಕಾಕಾನ ಪಾತ್ರ ಮಾಡಿದ ರಾಷೀದ್ ಖಾನ್, ''ಎಲ್ಲರೂ ಇದೇ ಉದ್ದೇಶದಿಂದ ಇಲ್ಲಿಗೆ ಬರುತ್ತಾರೆ. ಆದರೆ ಮುಂಬೈಯನ್ನು ಯಾರೂ ಖರೀದಿಸಲಾರರು. ಮುಂಬೈ ಎಲ್ಲರನ್ನೂ ಖರೀದಿಸಿ ಬಿಡುತ್ತದೆ. ತನ್ನ ಕೆಲಸ ಆದ ಮೇಲೆ ಯಾವುದೋ ರದ್ದಿ ಅಂಗಡಿ ಯಲ್ಲಿ ಬಿಸಾಕುತ್ತದೆ, ಎಂದು ಹೇಳುತ್ತಾನೆ. ಆಧುನಿಕ ಕಾಲದ ಮುಂಬೈ ಆಗಿರುವ ಬೆಂಗಳೂರು ಸಹಿತ ಹೀಗೆಯೇ. ಎಲ್ಲರನ್ನೂ ಖರೀದಿಸಿ ಬಿಡುತ್ತದೆ. ಅವರ ನಾಲಗೆಯನ್ನೂ ಕೂಡ.

ಇಂತಿರ್ಪ ಹೊರಟ್ಟಿ ಅವರು ಮೊನ್ನೆ ಸದನದಲ್ಲಿ ಒಂದು ಮಾತು ಹೇಳಿದರು. ಅದು ವೈರಲ್ ಆಯಿತು. ಆಚ್ಚಾ, ಈ ವೈರಲ್ ಅನ್ನುವ ಪದ ಯಾಕೆ ಬಳಸುತ್ತಾರೆ ಅಂತ ಗೊತ್ತಾ? ರೋಗದ ಸೋಂಕು ಹರಡಿದಂತೆ ಇಂತಹ ಮಾತುಗಳೂ ಹರಡುತ್ತವೆ ಎನ್ನುವುದಕ್ಕಾಗಿ ಅದನ್ನು ಬಳಸಲಾಗುತ್ತದೆ.

ಇರಲಿ, ಹೊರಟ್ಟಿ ಸಾಹೇಬರು ಹೇಳಿದ ಮಾತು ಇದು ''ಗ್ಯಾರಂಟಿ ಯೋಜನೆಗಳಿಂದ ಕೂಲಿ ಕೆಲಸಕ್ಕೆ ಜನ ಸಿಗುತ್ತಿಲ್ಲ. ನನ್ನ ಜಮೀನಿನ 36 ಎಕರೆ ಕಬ್ಬು ಕಟಾವು ಮಾಡ್ಲಿಕ್ಕೆ, ಇನ್ನುಳಿದ ಚೂರು ಪಾರು ಹೊಲದಲ್ಲಿ ಹತ್ತಿ ಬಿಡಿಸಲಿಕ್ಕೆ ಜನ ಇಲ್ಲ. ಎಂಥಾ ಕಾಲ ಬಂತು. ಇವೆಲ್ಲ ಬಂದು ಮಾಡ್ರಿ, ಅಂತ ಹೇಳಿದರು. ಗ್ಯಾಲರಿಯ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಬೇಕು ಅಂತಲೋ ಏನೋ, ಇನ್ನೊಂದು ಡೈಲಾಗು ಹೊಡೆದರು: ''ಕೊಡಲೇ ಬೇಕು ಅಂದರೆ ಕಡು ಬಡವರಿಗೆ ಗ್ಯಾರಂಟಿ ಕೊಡಿ. ಶ್ರೀಮಂತರಿಗೆ ಯಾಕೆ? ನನ್ನಂತಹ ವರಿಗೆ ಯಾಕೆ? ಸದನದಲ್ಲಿ ಎಷ್ಟು ಗಡ ಚಿಕ್ಕುವ ಚಪ್ಪಾಳೆ ಸಿಕ್ಕಿತೋ, ಅದಕ್ಕಿಂತ ಜೋರಾಗಿ ಗಡ ಗಡ ಚಿಕ್ಕುವಂತೆ ಆ ದಿನ ಟಿವಿಗಳಲ್ಲಿ, ಮರುದಿನ ಪೇಪರ್‌ಗಳಲ್ಲಿ ಚಪ್ಪಾಳೆ ಕೇಳಿಸಿತು.

ಇಂತಹ ಮಾತುಗಳ ಅರ್ಥ ಏನು? ''ಬಡವರು, ಹೊಟ್ಟೆ ಹಸಿದವರು ಮಾತ್ರ ಕೆಲಸ ಮಾಡಬೇಕು, ಹೊಟ್ಟೆ ತುಂಬಿದವರು ಯಾವುದೇ ಕೆಲಸ ಮಾಡಬಾರದು. ಹಸಿವು ಎನ್ನುವುದೇ ಬಡವರ-ಶ್ರಮಿಕರ ಪೆಟ್ರೋಲು, ಜೀವದ್ರವ್ಯ, ಅಂತಲೇ? ಕೇವಲ ವಾದ ಮಾಡುವ ಸಲುವಾಗಿ ಇದು ಇರಬಹುದು ಅಂದು ಕೊಳ್ಳೋಣ.

ವಿಶ್ವದ ಐದು ಅತಿ ಶ್ರೀಮಂತರ ಮತ್ತು ಭಾರತದ ಇಬ್ಬರು ಶ್ರೀಮಂತರ ಉದಾಹರಣೆಗಳನ್ನು ತೆಗೆದುಕೊಂಡು ನೋಡೋಣ.

ಅಮೆರಿಕದಲ್ಲಿ ನೆಲೆಸಿರುವ ದಕ್ಷಿಣ ಆಫ್ರಿಕಾ ಸಂಜಾತ ಈಲಾನ್ ಮಸ್ಕ ಅವರು ಜಾಗತಿಕ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇದ್ದಾರೆ. ಅವರಲ್ಲಿ ಸುಮಾರು 85 ಲಕ್ಷ ಕೋಟಿ ರೂಪಾಯಿ ಸಂಪತ್ತು ಇದೆ. ರಾಜ ಮನೆತನಗಳನ್ನು ಬಿಟ್ಟರೆ, ಅವರು ಮಾನವ ಇತಿಹಾಸದಲ್ಲಿಯೇ ಅತಿ ದೊಡ್ಡ ಸಾಹುಕಾರರು. ವಿದ್ಯುತ್ ಕಾರುಗಳು ಮತ್ತು ಸಾಂಪ್ರದಾಯಿಕ ಇಂಧನ ರಾಕೆಟ್ ತಂತ್ರಜ್ಞಾನ, ಎಕ್ಸ್ ಇತ್ಯಾದಿ ಕಂಪನಿಗಳ ಮಾಲೀಕರು.

ಗೂಗಲ್ ಕಂಪನಿಯ ಸಹ ಸ್ಥಾಪಕರಲ್ಲಿ ಒಬ್ಬರಾದ ಲ್ಯಾರಿ ಪೇಜ್ ಅವರು ಎರಡನೇ ಸ್ಥಾನದಲ್ಲಿ ಇದ್ದರೂ, ಅವರಿಗೂ ಮಸ್ಕ ಅವರಿಗೂ ತುಂಬ ವ್ಯತ್ಯಾಸ ಇದೆ. ಆಲ್ಫಬೆಟ್ ಕಂಪನಿ ಮಾಲೀಕರಾದ ಇವರ ಬಳಿ 28 ಲಕ್ಷ ಕೋಟಿ ರೂಪಾಯಿ ಇದೆ. ಇವರಿಗೂ ಮೂರನೇಯ ಸಾಹುಕಾರ ಜೇಫ್ ಬೇಜಾಸ ಅವರಿಗೂ ಅಷ್ಟು ವ್ಯತ್ಯಾಸ ಇಲ್ಲ. ಬೇಜಾಸ ಅವರ ಬಳಿ 26 ಲಕ್ಷ ಕೋಟಿ ಸಂಪತ್ತು ಇದೆ. ಅವರು ನಾವು ಕೂತಲ್ಲಿಯೇ ಖರೀದಿ ಮಾಡಿಸುವ ಕಂಪನಿ ಅಮೆಜಾನ್‌ನ ಮಾಲೀಕರು.

ಭಾರತದ ಅಂಬಾನಿ ಅವರ ಬಳಿ ಎಂಟು ಲಕ್ಷ ಕೋಟಿ ಹಾಗೂ ಅದಾನಿ ಅವರ ಬಳಿ 4 ಲಕ್ಷ ಕೋಟಿ ಇದೆ. ಇದು ಒಮ್ಮೊಮ್ಮೆ ಬದಲಾಗುತ್ತಾ ಇರುತ್ತದೆ. ಮಸ್ಕ್ ಪೇಜ್ ಅವರನ್ನು ಹೋಲಿಸಿದರೆ ಅದಾನಿ ಅಂಬಾನಿ ಅವರ ಸಂಪತ್ತು ಸಣ್ಣದು ಅನ್ನಿಸಬಹುದು. ಆದರೆ, ದರಿದ್ರ ನಾರಾಯಣರು ತುಂಬಿದ ಈ ದೇಶದ ಪರಿಸ್ಥಿತಿ ನೋಡಿದಾಗ ಅವರು ದೊಡ್ಡವರೇ.

ಭಾರತ ಸರ್ಕಾರದ ಅಂಕಿಅಂಶದಂತೆ ಇಲ್ಲಿನ ಜನರ ತಲಾ ಸರಾಸರಿ ಆದಾಯ ಒಂದು ತಿಂಗಳಿಗೆ 17,340 ರೂಪಾಯಿ. ಇದು ದೇಶದ ಸುಮಾರು 80 ಶೇಕಡಾ ಜನರ ವರಮಾನ. ಇನ್ನು 22 ಶೇಕಡಾ ಜನ, ಬಡತನ ರೇಖೆಯ ಕೆಳಗೆ ಇರುವವರು ಒಂದು ತಿಂಗಳಿಗೆ ಸುಮಾರು 816 ರೂಪಾಯಿ ಗಳಿಸುತ್ತಾರೆ. ಅಥವಾ ಒಂದು ದಿನಕ್ಕೆ ಊಟದಲ್ಲಿ 2100 2400 ಕ್ಯಾಲೋರಿ ತಿನ್ನುತ್ತಾರೆ.

ದಿನಕ್ಕೆ 27 ರೂಪಾಯಿ 20 ಪೈಸೆ ಗಳಿಸುವ ಬಡ ಬೋರೇಗೌಡನಿಗೂ ದಿನಕ್ಕೆ 24 ಸಾವಿರದ 285 ಕೋಟಿ, 27 ಲಕ್ಷ ಗಳಿಸುವ ಮಸ್ಕ್ ಸಾಹೇಬರಿಗೂ ಏನು ವ್ಯತ್ಯಾಸ? ಯಾರು ಹೆಚ್ಚು ಕಷ್ಟಪಟ್ಟು ದುಡಿಯುತ್ತಾರೆ?

ಮಸ್ಕ್ ಸಾಹೇಬರು ದಕ್ಷಿಣ ಆಫ್ರಿಕಾದಿಂದ ಕೆನಡಾಕ್ಕೆ 1989ರಲ್ಲಿ ವಲಸೆ ಹೋದ ಮೇಲೆ ಏನೇನು ಮಾಡಿದರು? ಮೊದಲು ಎಕ್ಸ್ ಅನ್ನುವ ಆನ್‌ಲೈನ್ ಪೇಮೆಂಟ್ ಕಂಪನಿ ಮಾಡಿದರು, ನಂತರ ವಿವಿಧ ರೀತಿಯ ತಂತ್ರಜ್ಞಾನ ಕಂಪನಿಗಳಲ್ಲಿ ಹೂಡಿಕೆ ಮಾಡಿದರು. ಈಗ ಅವರು ಅಮೆರಿಕ ಸರ್ಕಾರದ ನೀತಿ ನಿರೂಪಣೆ ಮಾಡುವಷ್ಟು ಪ್ರಭಾವಿಗಳು. ನಿಮಗೆ ಗೊತ್ತಿರಲಿ, ಅಮೆರಿಕದ ಬಡತನ ರೇಖೆ ಒಂದು ದಿನಕ್ಕೆ 4200 ರೂಪಾಯಿ. ಮಸ್ಕ್ ಸಾಹೇಬರು ಯಾವುದೋ ಒಂದು ದಿನ ತಮ್ಮ ಬಳಿ ದಿನಕ್ಕೆ 4200 ರೂಪಾಯಿ ಗಳಿಸುವ ಶಕ್ತಿ ಬಂದ ಮೇಲೆ ದುಡಿಯುವುದನ್ನು ನಿಲ್ಲಿಸಿದರೇ?

ಹಾಗೆಯೇ, ಐದು ನೂರು ರೂಪಾಯಿ ಬಂಡವಾಳ ಹಾಕಿ ಕಂಪನಿ ಶುರು ಮಾಡಿದ ಗೌತಮ್ ಅದಾನಿ ಅವರು ವಿಶ್ವದಲ್ಲಿಯೇ ಅತಿ ದೊಡ್ಡ ಸಾಹುಕಾರರಾದ ಮೇಲೆ ದುಡಿಯುವುದನ್ನು ನಿಲ್ಲಿಸಿದರೇ? ತನ್ನ ತಂದೆಯಿಂದ ಬಳುವಳಿಯಾಗಿ ಬಂದ ಕಂಪನಿ ಸಾಮ್ರಾಜ್ಯವನ್ನು ಮುಕೇಶ್ ಅಂಬಾನಿ ಅವರು ಇನ್ನೂ ದೊಡ್ಡದಾಗಿ ಬೆಳೆಸಿದರೇ ಅಥವಾ ಒಂದು ಹಂತಕ್ಕೆ ಬಂದ ಮೇಲೆ ನಿಲ್ಲಿಸಿಬಿಟ್ಟರೇ? ಇಲ್ಲವಲ್ಲ! ತಮ್ಮ ತಂದೆ ಇವತ್ತು ಬದುಕಿದ್ದರೆ ಅಚ್ಚರಿಪಡುವಂತೆ ಸಂಸ್ಥೆಗಳನ್ನು ಬೆಳೆಸಿದ್ದಾರೆ, ಸಂಪತ್ತು ಸೃಷ್ಟಿ ಮಾಡಿದ್ದಾರೆ. ಅದಾನಿ ಅವರಂತೂ ಇಡೀ ವಿಶ್ವವೇ ಅಚ್ಚರಿಪಡುವಂತೆ ಸಂಪತ್ತು ಸೃಷ್ಟಿ ಮಾಡಿದ್ದಾರೆ.

ಫಾರ್ಚೂನ್ 500 ಅಥವಾ 1000 ಪಟ್ಟಿಯಲ್ಲಿ ಇರುವವರು, ಅಥವಾ ಇಡೀ ಜಗತ್ತಿನ 3428 ಜನ ಲಕ್ಷಕೋಟ್ಯಾಧಿಪತಿಗಳು ಹೇಗೆ ಜೀವನ ಮಾಡುತ್ತಾರೆ? ಸೋಮಾರಿಗಳಂತೆ ಬಿದ್ದುಕೊಂಡಿರುತ್ತಾರೋ ಅಥವಾ ಎ.ಸಿ. ಕೊಠಡಿಯಲ್ಲಿ ಬೆವರು ಸುರಿಸದೇ ದುಡಿಯುತ್ತಿರುತ್ತಾರೋ? ಅವರಿಗೆ ಹೋಲಿಸಿದರೆ ಭಾರತದ ಬಿಕನಾಸಿ ಜಿರಲೆಗಳು ಹೇಗೆ ಹೊಟ್ಟೆ ಹೊರೆಯುತ್ತಾರೆ? ಈ ವಾದದ ಉಪಸಂಹಾರ ನಾನು ಮಾಡುವುದಿಲ್ಲ. ಪ್ರಾಜ್ಞರಾದ ನಿಮಗೆ ಬಿಟ್ಟಿದ್ದು.

ಇನ್ನು ಹಿರಿಯರಾದ ಹೊರಟ್ಟಿಯವರು ಹೇಗೆ ಮಾತಾಡಬಹುದಿತ್ತು? ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಗ್ರಾಮೀಣ ಅಭಿವೃದ್ಧಿ ತಜ್ಞರೂ, ನನ್ನ ಗುರುಗಳೂ ಆದ ಅಬ್ದುಲ್ ಅಜೀಜ್ ಅವರು ಒಂದು ಮಾತು ಹೇಳುತ್ತಿದ್ದರು: ''ಹಳ್ಳಿಗಳಲ್ಲಿ ಕೂಲಿ ಕೆಲಸಕ್ಕೆ ಜನ ಸಿಗೋದಿಲ್ಲ ಅನ್ನುವುದು ಅಪೂರ್ಣ ವಾಕ್ಯ. ನಾವು ಕೊಡುವ ಕೂಲಿಗೆ ಜನ ಸಿಗೋದಿಲ್ಲ ಅನ್ನುವುದು ಪೂರ್ಣ ವಾಕ್ಯ''.

ತಮ್ಮ ಜೀವನದಲ್ಲಿ ಒಂದು ಬಾರಿ ಶಿಕ್ಷಣ ಮಂತ್ರಿಯಾಗಿ, ಒಂದು ಬಾರಿ ಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಹೊರಟ್ಟಿ ಅವರು ಪ್ರೊ. ಅಜೀಜ್ ಅವರನ್ನು ಭೇಟಿ ಮಾಡಿರಲಿಕ್ಕಿಲ್ಲ. ಅವರು ಬರೆದ ಪುಸ್ತಕ ಓದಿರುವ ಸಾಧ್ಯತೆಯೂ ಕಮ್ಮಿ. ಆದರೆ ಅವರ ಮಾತಿನ ಹಿಂದೆ ಇರುವುದು ಸಾಮಾನ್ಯ ಜ್ಞಾನ. ಅರ್ಥಶಾಸ್ತ್ರದ ಪಿತಾಮಹ ಆಡಮ್ ಸ್ಮಿತ್ ಅಥವಾ ಈ ಬಾರಿ ನೊಬೆಲ್ ಪಡೆದ ಮೊಕಿರ, ಅಘಿಯಾನ್ ಹೊವಿಟ್ ಅವರ ಅರ್ಥಶಾಸ್ತ್ರದ ಸಿದ್ಧಾಂತವೂ ಅಲ್ಲ.

ಇನ್ನೂ ಸ್ವಲ್ಪ ಮುಂದೆ ಹೋದರೆ, ಹೊರಟ್ಟಿ ಮತ್ತು ಅವರಂತೆ ಸಾರ್ವಜನಿಕ ಜೀವನದಲ್ಲಿ ದಶಕಗಟ್ಟಲೆ ಅನುಭವ ಇರುವ ಹಿರಿಯರು ಮಾತಿನ ಮನೆಯಲ್ಲಿ ಏನು ಮಾತಾಡಬಹುದು? ಕೇವಲ ಸಮಸ್ಯೆಗಳನ್ನು ಹೇಳಬೇಕೇ ಅಥವಾ ಅವುಗಳ ಪರಿಹಾರಗಳನ್ನು ಸರ್ಕಾರ ಹಾಗೂ ಜನರ ಮುಂದೆ ಇಡಬೇಕೇ?

''ತನ್ನ ಹೊಲದಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಒಳ್ಳೆಯ ಕೂಲಿ ಕೊಡುವ ಸ್ಥಿತಿ ಬರುವಂತೆ ರೈತರನ್ನು ಸದೃಢರನ್ನಾಗಿ ಮಾಡಿ. ಕಾಫಿ ತೋಟದ ಮಾಲೀಕರು ತನ್ನ ಕೆಲಸಗಾರರನ್ನು ನೋಡಿಕೊಳ್ಳುವಂತೆ ತೊಗರಿ ಬೆಳೆಯುವ ರೈತರೂ ಆಗಲಿ'' ಎನ್ನುವ ಒಂದು ಮಾತನ್ನು ನಮ್ಮಿಂದಲೇ ಆರಿಸಿ ಹೋದ 299 ಶಾಸಕರು ಹಾಗೂ ಘನ ಸರ್ಕಾರದ 35 ಮಾನ್ಯ ಸಚಿವರಲ್ಲಿ ಯಾರಾದರೂ ಒಬ್ಬರು ಹೇಳಿದರೇ? ಅವತ್ತಂತೂ ಹೇಳಲಿಲ್ಲ. ಹಿಂದೆ ಯಾವಾಗಲಾದರೂ ಹೇಳಿದ್ದಾರೋ ನನಗೆ ಗೊತ್ತಿಲ್ಲ.

ಕೃಷಿ ಎನ್ನುವುದು ನಷ್ಟದ ಬಾಬತ್ತು. ರೈತರು ಬದುಕುವುದೇ ಕಷ್ಟ ಎನ್ನುವ ಸಿನಿಕತನದ ಅಭಿಪ್ರಾಯಗಳು ಬೇಡ. ಸರಿಯಾಗಿ ನೀರಿಲ್ಲದ -ಮಣ್ಣು ಇರದ ಇಸ್ರೇಲ್ ಮತ್ತು ಸಮುದ್ರ ಮಟ್ಟದಿಂದ ಕೆಳಗೆ ಇರುವ ನೆದರ್‌ಲ್ಯಾಂಡ್‌ಗಳು ಕೃಷಿ ಉತ್ಪನ್ನ ಮತ್ತು ರಫ್ತು ಕ್ಷೇತ್ರಗಳಲ್ಲಿ ಸಾಕಷ್ಟು ಮುಂದೆ ಹೋಗಿರುವಾಗ 'ಸುಜಲಾಂ ಸೂಫಲಾಮ್ ಶಾಮಲಾಂ ಎಂದೆನಿಸಿ ಕೊಳ್ಳುವ ಭಾರತ ಭೂಮಿಯಲ್ಲಿ ಇದು ಸಾಧ್ಯ ಇಲ್ಲವೇ?

ದಕ್ಷಿಣದಲ್ಲಿ ಏನಾದರೂ ಮಾಡಿಬಿಡಬಹುದು. ಉತ್ತರ ಕರ್ನಾಟಕದಲ್ಲಿ ಏನು ಮಾಡಬೇಕು? ನೀರಿಲ್ಲದ, ನೆಮ್ಮದಿ ಇಲ್ಲದ ಬರಡು ಭೂಮಿ ಎಂದು ಮೂಗು ಮುರಿಯಬೇಡಿ. ಮೈಸೂರು ಹೋಗಿ ಕರ್ನಾಟಕದ ಏಕೀಕರಣ ಆಗಬೇಕಾದಾಗ ಸಮಗ್ರ ಕರ್ನಾಟಕದ ಆಹಾರ ಸುರಕ್ಷೆಗೆ ಉತ್ತರ ಕರ್ನಾಟಕ ಬೇಕು ಎಂದು ಈ ರಾಜ್ಯದ ಪ್ರಜಾಪ್ರತಿನಿಧಿಗಳು ನಿರ್ಧಾರ ಮಾಡಿದ್ದರು. ಇದನ್ನು ನಾವು ಮರೆಯಬಾರದು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR